ರಾಷ್ಟ್ರೀಯ ಉದ್ಯಾನವನದಲ್ಲಿ ಬರುವ ಬೋಳೇಗೌಡನಕಟ್ಟೆ ಹುಲಿ ಸಂರಕ್ಷಣಾ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆ ಅನುಮತಿ ನೀಡುವುದಿಲ್ಲ.

(ಈ) ಜಮಖಂಡಿನಗರದಲ್ಲಿನ ತಾಲ್ಲೂಕು ಖಜಾನೆ ಕಚೇರಿಯಲ್ಲಿ ಕಂಪ್ಯೂಟರ್ ಕೆಟ್ಟಿರುವ ಬಗ್ಗೆ.

ಶ್ರೀ ಶ್ರೀಕಾಂತ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಜಮಖಂಡಿನಗರ ದಲ್ಲಿನ, ತಾಲ್ಲೂಕಿ ಖಜಾನೆ ಕಚೇರಿಯಲ್ಲಿದ್ದಂಥ ಕಂಪ್ಯೂಟರ್ ಕಳೆದ 2–3 ತಿಂಗಳಿನಿಂದ ಕೆಲಸ ಮಾಡದೆ, ಪದೆ ಪದೆ ರಿಪೇರಿಗೆ ಬಂದು ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಸ್ಥಳೀಯ ಅಧಿಕಾರಿಗಳು, ಹಿರಿಯ ಅಧಿಕಾರಿಗಳ ಗಮನಕ್ಕೆ ತರುವ ಕೆಲಸವನ್ನು ಮಾಡಿಲ್ಲ. ಜಮಖಂಡಿ ವಿಧಾನ ಸಭಾಕ್ಷೇತ್ರದ ಸುಮಾರು 25,000 ಫಲಾನುಭವಿಗಳು wife ಇರಬಹುದು, widow pension ಇರಬಹುದು, ಸಂಧ್ಯಾಸುರಕ್ಷವಿರಬಹುದು, ಅಂಗವಿಕಲರ ಮಾಶಾಸನ ಇತ್ಯಾದಿ ದೊಡ್ಡ ಸಂಖ್ಯೆಯಲ್ಲಿರುವ ಫಲಾನುಭವಿಗಳಿಗೆ ಕಳೆದ ಮೂರು ತಿಂಗಳಿಂದ ಯಾವುದೆ ಪೇಮೆಂಟ್ ಆಗಿಲ್ಲ, ಇದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಇದನ್ನು ರಿಪೇರಿ ಅಥವಾ ತಕ್ಷಣ ಬದಲಾವಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರೇನು ಕಂಪ್ಯೂಟರ್ ಕೆಟ್ಟಿರುವ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೆ ಜರುಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇವೆ.

6. ವಿತ್ತೀಯ ಕಾರ್ಯಕಲಾಪಗಳು :

2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ :

ಶ್ರೀ ವಿ ಶ್ರೀನಿವಾಸ ಪ್ರಸಾದ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯನ್ನು ಕೂಡ ಹೊಂದಿರುವವರು ಈಗಾಗಲೆ ಸದನದ ಮುಂದೆ ಮಂಡಿಸಿದ್ದಾರೆ. ಬಹುಶಃ ಮಂಡಿಸುವ ಸಂದರ್ಭದಲ್ಲು ಕೂಡ ಸದನದ ಗಮನವನ್ನು ಕೂಡ ಸೆಳೆದಿದ್ದರು. 5ನೇ ಸಾರಿ ಸತತವಾಗಿ ಬಜೆಟ್

ಅನ್ನು ಮಂಡನೆ ಮಾಡುತ್ತಿದ್ದೇನೆ ಎನ್ನುವ ಹೆಗ್ಗಳಿಕೆ ಕೂಡ ಅವರ ಪಾಲಿಗಿದೆ. ಅದರಲ್ಲಿ ಮುಖ್ಯಮಂತ್ರಿಗಳಾಗಿ ಮೂರನೇ ಬಾರಿಗೆ ಅವರು ಬಜೆಟನ್ನು ಮಂಡಿಸಿರತಕ್ಕಂಥದ್ದು, ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯ ಮಂತ್ರಿಗಳಾಗಿ ಆಗಲೂ ಕೂಡ ಹಣಕಾಸು ಇಲಾಖೆಯನ್ನು ಹೊಂದಿ ಎರಡು ಬಾರಿ ಬಜೆಟನ್ನು ಮಂಡಿಸಿರತಕ್ಕಂಥದ್ದು, ಮುಖ್ಯ ಮಂತ್ರಿಗಳಾದ ಮೇಲೆ ಮೊಟ್ಟ ಮೊದಲನೇ ಬಾರಿಗೆ ಮಂಡಿಸಿದಂತಹ ಆಯವ್ಯಯದಲ್ಲಿ ಅವರು ಒಂದು ಮಾತನ್ನು ಹೇಳಿದ್ದರು. ನಾನು ಸಮ್ಮಿಶ್ರ ಸರ್ಕಾರದಲ್ಲಿ ಹಣಕಾಸಿನ ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವನಾಗಿದ್ದರೂ ಕೂಡ ನಾನು ಒಳ್ಳೆಯ ಬಜೆಟನ್ನು ಕೊಡುವುದಕ್ಕಾಗಲಿಲ್ಲ ಎನ್ನತಕ್ಕಂಥದ್ದು, ಆದ್ದರಿಂದ ಸಮ್ಮಿಶ್ರ ಸರ್ಕಾರದಲ್ಲಿ ಜನಗಳಿಗೆ ಭ್ರಮನಿರಸನ ಆಯಿತು, ಜನಗಳ ನಿರೀಕ್ಷೆಗೆ ತಕ್ಕಂತೆ ನಾವು ಒಳ್ಳೆಯ ಆಡಳಿತವನ್ನು ಕೊಡುವುದಕ್ಕಾಗಲಿಲ್ಲ. ಹಾಗಾಗಿ ಜನ ನಮಗೆ ಬಹುಮತದ ಹತ್ತಿರ ಹತ್ತಿರ ತಂದಿದ್ದಾರೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಹಾಗಾಗಿ ನಾವು ಜನಗಳ ನಿರೀಕ್ಷೆಗೆ ತಕ್ಕಂತೆ ಅತ್ಯುತ್ತಮವಾದ ಬಜೆಟನ್ನು ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ರೇವಣ್ಣರವರು ಇದ್ದಾರೆ. ನಾನು ಸದನದಲ್ಲಿ ಚರ್ಚೆಯಾಗುತ್ತಿರುವಾಗ ನಾನು ಕೇಳುತ್ತಿರುತ್ತೇನೆ. ನೀವು 20 ತಿಂಗಳು ದೈಹಿಕವಾಗಿ ಒಂದಾಗಿದ್ದರೇ ಹೊರತು ಮಾನಸಿಕವಾಗಿ ಒಂದಾಗಿ ಯಾವತ್ತೂ ಕೂಡ ಆಡಳಿತ ನಡೆಸಿಲ್ಲ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. Physically ಒಂದಾಗಿದ್ದರೆ ಹೊರತು 'mentally working with different directors' ಎನ್ನತಕ್ಕಂಥಾದ್ದು. ಆ 20 ತಿಂಗಳುಗಳಲ್ಲಿ ಅವರೇನು ಎರಡು ಬಾರಿ ಬಜೆಟನ್ನು ಮಂಡಿಸಿದರು, ಅದು ಒಳ್ಳೆಯ ಬಜೆಟ್ ಆಗಲಿಲ್ಲ ಎಂದು ಅವರ ಮನಸ್ಸಿನಲ್ಲಿತ್ತು. ಆದರೆ ಈಗ ಅವರು ಮುಖ್ಯ ಮಂತ್ರಿಗಳಾಗಿ ಸ್ವತಃ ಅವರಿಗೆ ಬಹುಮತ ಇದ್ದಂತಹ ಸಂದರ್ಭದಲ್ಲಿ ನಾನು ಅತ್ಯುತ್ತಮವಾದ ಬಜೆಟನ್ನು ಕೊಡುತ್ತೇನೆ ಎನ್ನತಕ್ಕಂಥದ್ದನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು. ಅಭಿವೃದ್ಧಿ ಬಗ್ಗೆ ಬಹಳ ಒತ್ತಿ ಒತ್ತಿ ಹೇಳುತ್ತಿದ್ದರು. ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯತಕ್ಕಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ಸಾಧನೆಯಾಗಿ ಇಟ್ಟುಕೊಂಡು ನಾನು ಮಾಡಿದ್ದೇನೆ ಎನ್ನತಕ್ಕಂತಹ ಮಾತನ್ನು ಹೇಳಿದರು.

(ಈ ಹಂತದಲ್ಲಿ ಡಾ: ಹೆಚ್.ಸಿ. ಮಹಾದೇವಪ್ಪರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಸಾರಿಯ ಬಜೆಟ್ ವಿಶೇಷ ಎಂದರೆ, ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಐದು ಬಾರಿ ಬಜೆಟನ್ನು ಮಂಡಿಸಿಕೊಂಡು ಬಂದಿದ್ದಾರೆ. ಸಭಾ ನಾಯಕರ ಜೊತೆ ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಕೂಡ ಇದ್ದಾರೆ. ಒಂದು ಕಡೆ ಅವರು ಸತತವಾಗಿ ಐದು ಬಾರಿ ಸಭಾ ನಾಯಕರಾಗಿ ಬಜೆಟನ್ನು ಮಂಡಿಸಿದರೆ ಇವರು ವಿರೋಧ ಪಕ್ಷದ ನಾಯಕರಾಗಿ ಅನುಭವ ಇರತಕ್ಕಂಥಹವರು, ಏಳು ಬಾರಿ ಬಜೆಟನ್ನು ಮಂಡಿಸಿರತ್ಕಕಂತಹವರು ಮಾನ್ಯ ಸಿದ್ದರಾಮಯ್ಯನವರು. ಈ ಸಾರಿಯ ಬಜೆಟ್ಟಿನ ವಿಶೇಷ ಕೂಡ. ಮಾನ್ಯ ಸಿದ್ದರಾಮಯ್ಯನವರು ಏಳು ಬಾರಿ ತಮ್ಮ ಬಜೆಟನ್ನು ಏನು ಮಂಡಿಸಿದ್ದಾರೆ, ಅದರ ಅನುಭವದ ಮೇಲೆ ಸುಮಾರು ಐದು ಗಂಟೆಗಳ ಕಾಲ ಈ ಸದನದಲ್ಲಿ ಬಹಳ ಅರ್ಥಪೂರ್ಣವಾಗಿ ಸುದೀರ್ಘವಾಗಿ ಮಾತನಾಡಿದ್ದಾರೆ. ಎಳೆ ಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಅದು ಎಷ್ಟರ ಮಟ್ಟಿಗೆ ಅರ್ಥವಾಗಿದೆಯೋ ಅವರು ಉತ್ತರ ಕೊಡುತ್ತಾರೋ ಅವರು ಬಜೆಟ್ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನೋಡೋಣ. ನಾನು ಅದರ ಬಗ್ಗೆ ದೀರ್ಘವಾಗಿ ಹೋಗುವುದಿಲ್ಲ. ಅವರು ತುಂಬ ಚೆನ್ನಾಗಿ ಹೇಳಿದ್ದಾರೆ. Revenue surplus ಹೇಗೆ fiscal deficit 2009-10 ರಲ್ಲಿ ಹೇಗಾಗಿದೆ ಎನ್ನತಕ್ಕಂತಹ ರೀತಿಯಲ್ಲಿ ಸುದೀರ್ಘವಾಗಿ ಹೇಳಿದ್ದಾರೆ. ನಮ್ಮ ಶಾಸಕಾಂಗ ಪಕ್ಷದ ನಾಯಕರೂ ಕೂಡ ತುಂಬಾ ಚೆನ್ನಾಗಿ ಹೇಳಿದರು. ಅಧಿವೇಶನ ಇಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮಾತುಗಳು ಹಾಗೂ ಹೇಳಿಕೆಗಳು ಹೇಗಿದ್ದವು ಎಂದು ಹೇಳಿದರು. ಇಲ್ಲೆಲ್ಲಾ ಬೇಡ ನಾವು ಅಧಿವೇಶನ ಸೇರುತ್ತೇವೆ, ಬನ್ನಿ ಅಲ್ಲಿ ಮಾತನಾಡೋಣ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದರು. ಅಲ್ಲಿ ನೀವೂ ಹೇಳಿ, ನಾನೂ ಮಾತನಾಡುತ್ತೇನೆ, ಅಧಿವೇಶನದ ಮುಖಾಂತರ ಜನಗಳಿಗೆ ತಿಳಿಸೋಣ ಎಂದು ಹೇಳಿದರು. ಆದರೆ ಅವರು ಅಧಿವೇಶನದಲ್ಲಿ ಇರಲಿಲ್ಲ. ಅವರು Planning Commission Vice-Chairman ನೋಡುವುದಕ್ಕೆ ಹೋಗಿದ್ದರೋ ಮತ್ತೊಬ್ಬರನ್ನು ನೋಡುವುದಕ್ಕೆ ಹೋಗಿದ್ದರೋ ದೆಹಲಿಯಲ್ಲಿ ಬೇರೆ ಬೇರೆ ಕೆಲಸಗಳಿಗೆ ಹೋಗಿದ್ದರೋ ಗೊತ್ತಿಲ್ಲ. ಆದರೂ ಕೂಡ ನಮ್ಮ ಮಾನ್ಯ

ವಿರೋಧ ಪಕ್ಷದ ನಾಯಕರು ಬಜೆಟ್ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರಲಿಲ್ಲವೆಂದು ಅವರ ಗಮನವನ್ನು ಕೂಡ ಸೆಳೆದರು. ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ವಿವರವಾಗಿ ಹೋಗುವುದಿಲ್ಲ. ಒಂದು ವರ್ಷದ ಬಜೆಟ್‌ನಲ್ಲಿ ನೀವು ಕೊಟ್ಟಿರತಕ್ಕಂತಹ ಭರವಸೆಗಳು, ಕಾರ್ಯ ಕ್ರಮಗಳು, ನಿಮ್ಮ financial discipline ಹೇಗಿತ್ತು, ನಿಮ್ಮ resources mobilization ಹೇಗಿತ್ತು, ಯಾವ ರೀತಿ revenue surplus ಆಯಿತು, ಯಾವ ರೀತಿ fiscal deficit ಆಯಿತು ಎಂದು ತುಂಬಾ ಚೆನ್ನಾಗಿ ಹೇಳಿದ್ದಾರೆ. ನಾನು ಅದನ್ನು repeat ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ನಾವು ಯಾವುದೇ ಆಯವ್ಯಯವನ್ನು ಮಂಡಿಸಬೇಕಾದರೆ ನಮಗೆ ಆಧಾರದ ಎಂದರೆ Election Manifesto ಮೇಲೆ ನಾವು ಮಾಡುವುದು. ಜನತೆಗೆ ನಾವು ಭರವಸೆ ಕೊಟ್ಟಿರುವಂಥದ್ದು. ಯಾವುದೇ ರಾಜಕೀಯ ಪಕ್ಷಕ್ಕೆ ಚುನಾವಣಾ ಪ್ರಣಾಳಿಕೆ ನಮಗೆ ಅದು ಬೈಬಲ್ ಆಗಿರುತ್ತದೆ, ಖುರಾನ್‌ನಷ್ಟೇ ಪವಿತ್ರ ಮತ್ತು ಭಗವದ್ಗೀತೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇವೆ. ಬೈಬಲ್ ಅಥವಾ ಖುರಾನ್ ಎಂದು ಹೇಳಿದರೆ ನಿಮಗೆ ಸ್ವಲ್ಪ ಕೋಪ ಬರಬಹುದು. ಅದು ನಿಮ್ಮ ಪಾಲಿಗೆ ಭಗವದ್ಗೀತೆನೆ ಆಗಿರಲಿ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಜನಗಳಿಗೆ ಏನು ಭರವಸೆ ಕೊಟ್ಟಿರುತ್ತೇವೆ ಅದರ ಮೇಲೆ ನಾವು ಬಜೆಟನ್ನು ಮಂಡಿಸತಕ್ಕಂಥದ್ದು. ಬಜೆಟನ್ನು ಮಂಡಿಸುವಾಗ ನಾವು ಅಂಗೈಯಲ್ಲಿ ಅರಮನೆ ಸೃಷ್ಟಿ ಮಾಡಿಬಿಡಬಹುದು. ಭರವಸೆಗಳ ಮಹಾಪೂರ ಕಾರ್ಯಕ್ರಮಗಳನ್ನು ಬೇಕಾದಷ್ಟು ಹೇಳಬಹುದು. ಅಲ್ಲಿ ಹೇಳತಕ್ಕಂಥದ್ದಕ್ಕೆ ಅವಕಾಶಗಳಿವೆ. ಆದರೆ ಎಷ್ಟರ ಮಟ್ಟಿಗೆ ಅದನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನತಕ್ಕಂಥದ್ದು ಪ್ರಶ್ನೆ. ನಾವು ಭರವಸೆಗಳನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತೇವೆ ಎನ್ನತಕ್ಕಂಥದ್ದು ಬಹಳ ಮುಖ್ಯವಾದುದು. ಈ ಕಡೆ ನಾವು ಬಹಳ ಗಮನವನ್ನು ಕೊಡಬೇಕಾ ಗುತ್ತದೆ. resources mobilization ತುಂಬಾ ಇರತಕ್ಕಂಥದ್ದು. ಹಣಕಾಸನ್ನು ನಾವು ಯಾವ ರೀತಿ ಸಂಗ್ರಹ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಬಜೆಟ್‌ನಲ್ಲಿ ಎಷ್ಟು ಜಮೆ ಆಗುತ್ತದೆ. ಖರ್ಚು ಕೂಡ ಹಾಗೆಯೇ ಇರುತ್ತದೆ. What is budget? Budget is receipt and expenditure. Resources ನ್ನು mobilize ಮಾಡುವುದು ಅದಕ್ಕೆ ತಕ್ಕಂತಹ

ರೀತಿಯಲ್ಲಿ ನಾವು ಯೋಜನೆಗಳನ್ನು ರೂಪಿಸಿ ಹಣವನ್ನು ಖರ್ಚು ಮಾಡುವಂತಹ ರೀತಿಯಲ್ಲಿ ಇರುತ್ತದೆ. ಎಲ್ಲರಿಗೂ ಒಪ್ಪಿಗೆಯಾಗುವಂತಹ ಬಜೆಟ್ ಈ ದೇಶದ ಇತಿಹಾಸದಲ್ಲಿ ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಕೊಡುವುದಕ್ಕಾಗುವುದಿಲ್ಲ. ಬಜೆಟ್ ಅನ್ನು ಮಂಡಿಸಿದ ತಕ್ಷಣ ನಾವೂ ಹೇಳುತ್ತೇವೆ, ಆಡಳಿತ ನಡೆಸತಕ್ಕಂತಹವರು ನಮಗೆ ಬಹಳ ಆಶಾದಾಯಕವಾದ ಬಜೆಟ್ ಎಂದು ಸಹಜವಾಗಿ ಹೇಳಲೇಬೇಕು.

ನಾವು ವಿರೋಧ ಪಕ್ಷದಲ್ಲಿರುವವರು ನಿರಾಶಾದಾಯಕವಾದ ಬಜೆಟ್ ಎಂದು ಹೇಳುತ್ತೇವೆ. ನಾವು ಕೇಂದ್ರದವರು ಬಜೆಟ್ ಮಂಡಿಸಿದಂತಹ ಸಂದರ್ಭದಲ್ಲಿ ನೀವು ವಿರೋಧ ಪಕ್ಷದಲ್ಲಿದ್ದರೆ ನೀವೂ ಕೂಡ ಹೇಳುತ್ತೀರಿ. ಇದು ನಿರಾಶಾದಾಯಕವಾದ ಬಜೆಟ್, ಆಡಳಿತ ನಡೆಸುವವರು ಆಶಾದಾಯಕವಾದ ಬಜೆಟ್ ಎಂದು ಹೇಳುತ್ತೇವೆ. ಆದರೆ ನೀವು ಮಾತನಾಡುವ ಸಂದರ್ಭದಲ್ಲಿ ಅಥವಾ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಮಗೆ ಎಲ್ಲಿ ಆಶಾದಾಯಕವಾಗಿದೆ ಎಂಬುದನ್ನು ಹೇಳಬೇಕು. ಎಲ್ಲಿ ಆಶಾದಾಯಕವಾದ ಕಾರ್ಯಕ್ರಮಗಳನ್ನು ಹಾಕಿದ್ದೇವೆ, ಎಲ್ಲಿ ಆಶಾದಾಯಕವಾದ ಚಿಂತನೆಗಳನ್ನು ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ಹೇಳುತ್ತೀರಿ. ನೀವು ಎಲ್ಲಿ ಎಡವಿದ್ದೀರಿ, ಏಕೆ ಇದು ನಿರಾಶಾದಾಯಕವಾದ ಬಜೆಟ್ ಆಗಿದೆ ಎನ್ನತಕ್ಕಂಥದ್ದು ಹೇಳತಕ್ಕಂಥದ್ದು ನಮ್ಮ ಜವಾಬ್ದಾರಿ ಹಾಗೂ ನಮ್ಮ ಕರ್ತವ್ಯ ಕೂಡ ಆಗಿರುತ್ತದೆ. ಹಾಗಾಗಿ ಈ ಬಜೆಟ್‌ನಲ್ಲಿ ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿ ಇದು ಒಂದು ರೀತಿ ಸಮತೋಲನವಾದ ಹಾಗೂ ಆಶಾದಾಯಕವಾದ ಬಜೆಟ್ ಆಗುವ ಬದಲು ಸ್ವಲ್ಪ ನಿರಾಶಾದಾಯಕವಾದ ಬಜೆಟ್ ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ಇದಕ್ಕೆ ಕಾರಣ ಕೂಡ ಬಹಳ ಮುಖ್ಯ. ಏಕೆಂದರೆ, resources mobilization ಬೇಕೆಂದು ನಾನು ಹೇಳಿದೆ. ಇದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಇಲಾಖೆಯನ್ನು ಇಟ್ಟುಕೊಂಡಿರುವುದರಿಂದ ಇದು ಸಾಧ್ಯವಾಗುತ್ತಿದೆಯೇ ಎಂದು ತಾವು ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. Finance portfolio ಇಟ್ಟುಕೊಂಡಿರುವವರು ಇದು ಬೆಳಿಗ್ಗೆಯಿಂದ ರಾತ್ರಿಯ ವರೆಗೆ ಕಣ್ಣಿನಲ್ಲಿ ಕಣ್ಣು ಇಟ್ಟು ನೋಡತಕ್ಕಂಥದ್ದು ಆಗಬೇಕು. ಟ್ರೆಜರಿ ತುಂಬಿದರೆ ಎಲ್ಲಾ ಕೆಲಸ ನಡೆಯುವುದು. ಖಜಾನೆ ಇದ್ದರೆ ತಾನೆ ನಿಮ್ಮ ಎಲ್ಲಾ ಇಲಾಖೆಗಳು ನಡೆಯತಕ್ಕಂಥದ್ದು. ಬಹುಶಃ ಅದಕ್ಕೋಸ್ಕರ ಮಾನ್ಯ

ಸಿದ್ದರಾಮಯ್ಯನವರು ಬಹಳ ಯಶಸ್ವಿಯಾದ ಹಣಕಾಸಿನ ಸಚಿವರಾಗಿದ್ದರು. ಅವರ ಸರ್ಕಾರದಲ್ಲಿ ಹಣಕಾಸು ತುಂಬ ಇದ್ದು ಅದು ನಡೆಯುತ್ತಿತ್ತು. ಈಗಿರತಕ್ಕಂತಹ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಳಿ ಬಹುಶಃ 12 ಇಲಾಖೆಗಳಿವೆ. ಒಬ್ಬ ಮುಖ್ಯಮಂತ್ರಿ ಬಳಿ 12 ಇಲಾಖೆಗಳು ಮತ್ತು ರಾಜಕೀಯವಾಗಿ ಭಿನ್ನಮತೀಯ ಚಟುವಟಿಕೆಗಳು. ನೆನ್ನೆ ಕೂಡ ಇಲ್ಲಿ ಇರುತ್ತಾರೆ ಎಲ್ಲೋ ಒಂದು ಕಡೆ ರೆಸಾರ್ಟ್‌ನಲ್ಲಿ ಸಭೆ ನಡೆಯುತ್ತಿದ್ದರೆ ಅಲ್ಲಿ ಗಮನ ಹರಿಸುವುದಕ್ಕಾಗಿ ಓಡುತ್ತಾರೆ. Uncertainty ಅವರಿಗೆ ಕಾಡುತ್ತಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಬಳಿ 12 portfolio, ಒಂದು ಸಚಿವ ಸಂಪುಟ ವ್ಯವಹಾರಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಹಣಕಾಸು, Intelligence (ಗುಪ್ತ ವಾರ್ತೆ) ನಗರಾಭಿವೃದ್ಧಿ, ನಗರಾಭಿವೃದ್ಧಿಯಲ್ಲಿ BDA ಮತ್ತು ಮಹಾನಗರ ಪಾಲಿಕೆಗಳು, ಕನ್ನಡ ಮತ್ತು ಸಂಸ್ಕೃತಿ, ಗಣಿ ಮತ್ತು ಭೂ ವಿಜ್ಞಾನ, ಸಾರ್ವಜನಿಕ ಸಂಸ್ಥೆಗಳು ಅರಣ್ಯ, ಜೀವ ಶಾಸ್ತ್ರ ಮತ್ತು ಪರಿಸರ ಇಲಾಖೆ. ಇದರ ಜೊತೆಗೆ ಈಗ ಮಾನ್ಯ ಈಶ್ವರಪ್ಪನವರು ರಾಜೀನಾಮೆ ಕೊಟ್ಟ ಮೇಲೆ ಎನರ್ಜಿ. ಪವರ್ ಮಿನಿಸ್ಟರ್ ಕೂಡ ಅವರೇ. ಹೀಗೆ ಸುಮಾರು 12 ಇಲಾಖೆಗಳನ್ನು ಇಟ್ಟುಕೊಂಡಿರತಕ್ಕಂತಹವರು ತಮ್ಮದೇ ಆದ ರಾಜಕೀಯವಾದ ತೊಂದರೆಗಳಿರತಕ್ಕಂತಹವರು ಒಬ್ಬ ಮುಖ್ಯ ಮಂತ್ರಿಗಳು ಹಣಕಾಸಿನ ಬಗ್ಗೆ ಹಾಗೂ ರಿಸೋರ್ಸಸ್ ಬಗ್ಗೆ ಅಷ್ಟೊಂದು concentration ಮಾಡುವುದಕ್ಕೆ ಆಗುತ್ತದಾ? ಇಷ್ಟೊಂದು ಇಲಾಖೆಗಳನ್ನು ಇಟ್ಟುಕೊಂಡು ಅವರು ಗಮನ ಕೊಡುವುದಕ್ಕೆ ಆಗುತ್ತಿಲ್ಲ ಹಾಗಾಗಿ ನಮಗೆ fiscal deficit ಬರುವುದಕ್ಕೆ ಇದೆಲ್ಲಾ ಕಾರಣವಾಗಿದೆ. Financial discipline ಸರಿಯಾದ ರೀತಿಯಲ್ಲಿ ಇಲ್ಲ, ಪೂರ್ಣ ಪ್ರಮಾಣದಲ್ಲಿ ಆ ಕಡೆ ಗಮನ ಕೊಟ್ಟು ಸಂಪನ್ಮೂಲಗಳನ್ನು ಸಂಗ್ರಹ ಮಾಡತಕ್ಕಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಆಗುತ್ತಿಲ್ಲ. ಬಹಳ ತೊಂದರೆ ಇದೆ. ಇದಕ್ಕೆ ಪೂರ್ಣ ಪ್ರಮಾಣದಲ್ಲಿರತಕ್ಕಂತಹ ಅದರ ಬಗ್ಗೆ ಅನುಭವ ಇರತಕ್ಕಂತಹ ಅದರ ಬಗ್ಗೆ ಬಹಳ ಬುದ್ಧಿವಂತಿಕೆಯಿಂದ ಹಾಗೂ ಚಾಕಚಕ್ಯತೆಯಿಂದ ಮಾಡತಕ್ಕಂತಹ ಒಬ್ಬ ಹಣಕಾಸಿನ ಸಚಿವರು ಇದ್ದಾಗ ಮಾತ್ರ ಬಜೆಟ್‌ಗೆ ಅರ್ಥ ಇರುತ್ತದೆ. ಬಹುಶಃ ಸಂಪನ್ಮೂಲಗಳು ಸಂಗ್ರಹ ಆಗುತ್ತವೆ ಎಂದು ಈ ಸಂದರ್ಭದಲ್ಲಿ ನಾನು ಅವರ ಗಮನವನ್ನು ಸೆಳೆಯುತ್ತಾ, ನಾನು ಅನೇಕ ರಾಜ್ಯಗಳ

ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಮಾನ್ಯ ದಿಗ್ವಿಜಯಸಿಂಗ್‌ರವರು ಮಧ್ಯಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದಾಗ ಒಂದೇ ಒಂದು porfolio ಅವರು ಇಟ್ಟುಕೊಂಡಿರಲಿಲ್ಲ. ಮುಖ್ಯಮಂತ್ರಿ ಆದರೆ, he is the captain of the team. ಮಂತ್ರಿಮಂಡಲದ ನಾಯಕ ಹಾಗೂ ಮುಖಂಡರಾಗಿರುವವರು. ಸಂಪೂರ್ಣ over all supervise ಮಾಡತಕ್ಕಂತಹ ಅಧಿಕಾರ ಅವಕಾಶಗಳಿರತಕ್ಕಂತಹ ಜವಾಬ್ದಾರಿ ಇರತಕ್ಕಂತಹವರು. ಅವರು ಪ್ರತಿಯೊಂದು ಇಲಾಖೆ ಕೂಡ ನೋಡಬಹುದು.

ತಮ್ಮ ಕ್ಯಾಬಿನೆಟ್ ಸಹೋದ್ಯೋಗಿಗಳಿರತಕ್ಕಂಥ ಎಲ್ಲ ಇಲಾಖೆಗಳವರೂ ಕೂಡ ಕುಳಿತು ಒಬ್ಬ ಮುಖ್ಯಮಂತ್ರಿಗಳಾದ ತಾವು ಸಂಪೂರ್ಣವಾಗಿ ನಿಮ್ಮ ಆಡಳಿತದಲ್ಲಿ ಎಲ್ಲೆಲ್ಲಿ ಏನೇನು ನಡೆಯುತ್ತಿದೆ, ಎಲ್ಲೆಲ್ಲಿ ನ್ಯೂನತೆಗಳಿವೆ, ತೊಂದರೆಗಳಿವೆ, ಎಲ್ಲಿ ಸರಿಪಡಿಸಬೇಕು ಎನ್ನುವ ಕಡೆಗೆ ಗಮನ ಕೊಟ್ಟರೆ ಮಾತ್ರ ನೀವು ಉತ್ತಮ ಆಡಳಿತವನ್ನು ಕೊಡುವುದಕ್ಕೆ ಸಾಧ್ಯ. ಬಹುಶಃ ಇವತ್ತು ನೀವು 12 portfolio ಗಳನ್ನು ಇಟ್ಟುಕೊಂಡು ಇವತ್ತು ಒಳ್ಳೆಯ ಬಜೆಟ್‌ನ್ನು ಕೊಡತಕ್ಕಂಥದ್ದರ ಬಗ್ಗೆ, ಹೆಚ್ಚು ಹಣವನ್ನು ಸಂಗ್ರಹ ಮಾಡಿ ಆಡಳಿತವನ್ನು ಚೆನ್ನಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲವೆನ್ನತಕ್ಕ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇನ್ನು ಬಜೆಟ್ ಬಗ್ಗೆ ಹೇಳಬೇಕೆಂದರೆ, ನಾವು ಅನೇಕ ಸಲ ಚಾಣಕ್ಯ, ಕೌಟಿಲ್ಯರ ಹೆಸರುಗಳನ್ನು ಹೇಳುತ್ತೇವೆ. ನನ್ನ ದೃಷ್ಟಿಯಲ್ಲಿ ಇವತ್ತು ಚಾಣಕ್ಯನ ಅರ್ಥಶಾಸ್ತ್ರ ಅಥವಾ ಕೌಟಿಲ್ಯನ ಅರ್ಥಶಾಸ್ತ್ರಗಳಿಲ್ಲ. ಒಂದು ರೀತಿ outdated ಆಗಿಬಿಟ್ಟಿದೆಯೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ಬಹುಶಃ ನಮಗೆ ಯಾವ ರೀತಿಯಾದಂಥ ಆರ್ಥಿಕ ಚಿಂತನೆಗಳನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆಯನ್ನು ಮಾಡಿದಾಗ ಗಾಂಧೀಜಿಯವರ ಆರ್ಥಿಕ ಚಿಂತನೆಗಳೇನಿವೆಯಲ್ಲ ಬಹುಶಃ ಈ ತರಹದ ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ಆಯ್ಕೆಯಾಗಿ ಬಂದು ಆಡಳಿತವನ್ನು ನಡೆಸತಕ್ಕಂಥವರು ಸ್ವಲ್ಪ ಆ ಕಡೆಗೆ ಗಮನವನ್ನು ಕೊಡಬೇಕಾಗುತ್ತದೆ. ಗಾಂಧೀಜಿಯವರ ಆರ್ಥಿಕ ಚಿಂತನೆಗಳು ಎಂದರೆ ಅವು ಬಹಳ ಸರಳವಾಗಿದೆ. ಅಂತ್ಯೋದಯ ಮತ್ತು ಸರ್ವೋದಯ ಎನ್ನತಕ್ಕಂಥದ್ದು. ಅಂತ್ಯೋದಯ ಎಂದರೆ ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರತಕ್ಕಂಥವರು. ಗಾಂಧೀಜಿಯವರು ಅಂತ್ಯೋದಯ ಎಂದು ಹೇಳಿದರೆ ಅವರು ಬೆಳಿಗ್ಗೆ

Sweeping Community ಭಂಗಿ ಕಾಲೋನಿಯಲ್ಲಿ ಚಹಾ ಕುಡಿಯುವವರ ಜೊತೆ ಅಂತ್ಯೋದಯ, ಅಲ್ಲಿಂದ ಅವರ ಶ್ರೇಯಸ್ಸು, ಅವರ ಅಭಿವೃದ್ಧಿ, ಅಲ್ಲಿಂದ ಸರ್ವೋದಯದವರೆಗೆ ಹೋಗಿ ಸಮಾಜದ ಬಗ್ಗೆ ಚಿಂತನೆಯನ್ನು ಮಾಡತಕ್ಕಂಥ ರೀತಿಯಲ್ಲಿ ಇದ್ದಂಥ ಗಾಂಧೀಜಿಯವರ ಆಲೋಚನೆಗಳು ಮತ್ತು ಅವರ ಆರ್ಥಿಕ ಚಿಂತನೆಗಳು ಕೂಡ ಇದ್ದವು. ಸ್ವಲ್ಪ ನೀವು ಆ ಕಡೆಯಲ್ಲಿ ಚಿಂತನೆ ಮಾಡಬೇಕು. ಏಕೆಂದರೆ ಬಿ.ಜೆ.ಪಿ.ಯವರು ಕೂಡ socialism ನಿಂದ ದೂರ ಹೋಗಿಲ್ಲ ಒಂದು ಸಾರಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೂಡ ನಾನು ನೆನಪಿಸಿದೆ. 1979 ರಲ್ಲಿ ಭಾರತೀಯ ಜನತಾ ಪಕ್ಷ ಹೊಸದಾಗಿ ಬಂದು ಅಟಲ್ ಬಿಹಾರಿ ವಾಜಪೇಯಿಯವರು ಅಧ್ಯಕ್ಷರಾದಾಗಲೂ ಕೂಡ ಅಲ್ಲಿ ಬಹಳ ಚರ್ಚೆಗಳು ನಡೆಯಿತು. ಇವತ್ತಿನ ಸಂದರ್ಭದಲ್ಲಿ ಈ ರಾಜ್ಯದ, ರಾಷ್ಟ್ರದ ರಾಜಕೀಯದಲ್ಲಿ ನಾವು ಸಮಾಜವಾದವನ್ನು ಅಳವಡಿಸಿಕೊಳ್ಳದೇ ಹೋದರೆ, ಆ ರೀತಿಯ ಚಿಂತನೆಗಳನ್ನು ಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಹೋದರೆ ಕೇವಲ ನಾವು ಹಿಂದಿ, ಹಿಂದೂ, ಹಿಂದೂಸ್ತಾನ ಎಂದು ಹೇಳಿಕೊಂಡು ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ, ಜನರ ಬೆಂಬಲವನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಸಮಾಜವಾದವನ್ನೂ ಕೂಡ ನಾವು ಅಳವಡಿಸಿಕೊಳ್ಳಬೇಕು, ಆ ರೀತಿಯ ಕಾರ್ಯಕ್ರಮಗಳ ಚಿಂತನೆಗಳಾಗಬೇಕು ಎಂದು ಬಿ.ಜೆ.ಪಿ. ಆ ನಿಟ್ಟಿನಲ್ಲಿ ಹೊರಟಿತು. ಆಗ Gandhijian Socialism ಅನ್ನು adopt ಮಾಡಿಕೊಂಡಂಥವರು ಕೂಡ ಆದರು. Gandhijian Socialism ಅನ್ನು adopt ಮಾಡಿಕೊಂಡಿರ ತಕ್ಕಂಥವರೂ ಕೂಡ ಗಾಂಧೀಜಿಯವರ ಆರ್ಥಿಕ ಚಿಂತನೆಗಳನ್ನು ನಾವು ಅಳವಡಿಸಿಕೊಂಡರೆ, ಆ ರೀತಿಯಾದಂಥ ಚಿಂತನೆಗಳನ್ನು ಮಾಡಿದರೆ ಬಹಳ ಅತ್ಯುತ್ತಮವಾದಂಥ ಬಜೆಟ್ ಆಗುತ್ತದೆ. ಇವತ್ತು ಸಮಾಜದಲ್ಲಿರತಕ್ಕಂಥ ಅಶಕ್ತರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಜವಾಬ್ದಾರಿಯಾಗಿರುತ್ತದೆ. ಅಶಕ್ತರು ಎಂದರೆ ಯಾರಿಗೆ ಶಕ್ತಿ. ಇಲ್ಲವೋ, ಯಾವ ಜನಾಂಗಕ್ಕೆ ಶಕ್ತಿ ಇಲ್ಲವೋ ಅಂಥವರ ನೆರವಿಗೆ ಹೋಗತಕ್ಕಂಥದ್ದು, ಅವನ ಆರ್ಥಿಕ ಸಬಲೀಕರಣವಾಗತಕ್ಕಂಥದ್ದು, ಅವನಿಗೆ ಸಾಮಾಜಿಕವಾದಂಥ ರೀತಿಯಲ್ಲಿ ನೆಮ್ಮದಿ ಸಿಗತಕ್ಕಂಥ ರೀತಿಯಲ್ಲಿ ಮತ್ತು ಅವನಿಗೆ ಶೈಕ್ಷಣಿಕವಾದಂಥ ರೀತಿಯಲ್ಲಿ ಬೆಳವಣಿಗೆಯಾಗಬೇಕು ಎನ್ನತಕ್ಕಂಥದ್ದರ ಬಗ್ಗೆ, ಹೀಗೆ ಒಟ್ಟಾರೆ

ಅಶಕ್ತರ ಬಗ್ಗೆ ಯೋಚನೆ ಮಾಡತಕ್ಕಂಥದ್ದರ ಬಗ್ಗೆ ಮೊದಲನೆಯದಾಗಿ ಆದ್ಯತೆಯನ್ನು ಕೊಡಬೇಕು ಎನ್ನತಕ್ಕಂಥದ್ದು ಮುಖ್ಯ. ಆ ಹಿನ್ನಲೆಯಲ್ಲಿ ಅಂತ್ಯೋದಯ ಮತ್ತು ಸರ್ವೋದಯದ ಆರ್ಥಿಕ ಚಿಂತನೆಗಳ ಹಿನ್ನಲೆಯಲ್ಲಿ ನೀವು ಬಜೆಟ್‌ನ್ನು ಹೊಂದಿಸಬಹುದಾಗಿತ್ತು. ಆದರೆ ನೀವು ಕೆಳಸ್ತರದವರಿಗೆ ಏನನ್ನೂ ಕೊಟ್ಟೇ ಇಲ್ಲವೆಂದು ಹೇಳುತ್ತಿಲ್ಲ. ಆದರೆ ಯಾವ ಪ್ರಮಾಣದಲ್ಲಿ ಮತ್ತು ಯಾವ ಮಟ್ಟದಲ್ಲಿ ಅವರ ಬಗ್ಗೆ ಯೋಜನೆ ಕೊಡಬೇಕಾಗಿತ್ತೋ, ಕೆಳಸ್ತರದವರಿಗಾಗಿ ಅಂತ್ಯೋದಯದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕಾಗಿತ್ತೋ, ಬಜೆಟ್‌ನಲ್ಲಿ ಅವರಿಗೆ ಹೆಚ್ಚಿನ ಹಣಕಾಸಿನ ಸಹಾಯವನ್ನು ಮಾಡಬೇಕಾಗಿತ್ತೋ ಆ ಮಟ್ಟಕ್ಕೆ ನೀವು ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಸ್ವಲ್ಪ ಅವೆಲ್ಲಾ ಬಿಟ್ಟು ಸರ್ವೋದಯದ ಕಡೆಗೆ ನೀವು ಯೋಚನೆಯನ್ನು ಮಾಡಿದ್ದೀರಿ ಎನ್ನತಕ್ಕಂಥದ್ದನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಮೈಸೂರಿನಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದರು. ಇತ್ತೀಚೆಗೆ ಒಂದು ಆರಾಧನಾ ಕಾರ್ಯಕ್ರಮ ದಲ್ಲಿ, ನನಗೆ ಎಲ್ಲಿಯವರೆವಿಗೆ ಮಠಗಳು, ಮಠಾಧಿಪತಿಗಳಿರುತ್ತಾರೋ ಅಲ್ಲಿಯವರೆವಿಗೆ ನನ್ನ ಸರ್ಕಾರಕ್ಕೆ ಭಯವಿಲ್ಲ, ನಾನು ನಿರ್ಭೀತಿಯಿಂದ ಆಡಳಿತವನ್ನು ನಡೆಸುತ್ತೇನೆಂದರು. ನಾನು ಅದರ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬಹುಶಃ ತಮಗೆ ಹೇಳತಕ್ಕಂಥದ್ದು, ಮಠಗಳ, ಮಠಗಳ ಮಠಾಧಿಶರ ಆಶೀರ್ವಾದ ಇರುವವರೆವಿಗೆ ನಿಮಗೆ ನಿರ್ಭೀತಿ ಯಿಂದ ಆಡಳಿತ ನಡೆಸುತ್ತೇವೆ ಎನ್ನುವ ಭಯವಿಲ್ಲವೋ ಅಥವಾ ರೆಡ್ಡಿ ಸಹೋದರರ ಬೆಂಬಲವಿರುವವರೆವಿಗೆ ನಿಮಗೆ ನಿರ್ಭೀತಿಯಿಂದ ಆಡಳಿತ ವನ್ನು ನಡೆಸುವುದಕ್ಕೆ ಸಾಧ್ಯ ನಿಮಗೆ ಎನ್ನತಕ್ಕಂಥದ್ದು, ರೆಡ್ಡಿ ಸಹೋದರರ ಬೆಂಬಲವಿಲ್ಲದಿದ್ದರೆ ಸಾಧ್ಯವೆ? ಇಲ್ಲ. ನಿಮಗೆ ಗೊತ್ತಿದೆ, ಇತ್ತೀಚೆಗೆ ನಡೆದಂತ ಚಟುವಟಿಕೆಗಳಲ್ಲಿ ನೀವು ಎಲ್ಲೂ ತತ್ತರಿಸಿ ಹೋಗಿದ್ದೀರಿ. ಸ್ವತಃ ಮುಖ್ಯಮಂತ್ರಿಗಳೆ, ನಿಮಗೆ ಮಠಗಳ ಮಠಾಧೀಶರ ಆಶೀರ್ವಚನವಲ್ಲ, ಅದು ಇಲ್ಲದೇ ಇದ್ದರೂ ಕೂಡ ನಡೆಯುತ್ತದೆ. ಆದರೆ ನೀವು ಹೇಳಬೇಕು, ರೆಡ್ಡಿ ಸಹೋದರರ ಬೆಂಬಲವಿಲ್ಲದೇ ಹೋದರೆ ನಿಮ್ಮ ಸರ್ಕಾರ ಗಡಗಡ ನಡುಗುತ್ತಿರುತ್ತದೆ. ನಮಗೂ ಕೂಡ ಮಠಗಳ ಬಗ್ಗೆ ಬಹಳ ಗೌರವವಿದೆ. ಸರ್ಕಾರದಿಂದ ಹಣಕಾಸಿನ ನೆರವನ್ನು ಕೇಳಿರತಕ್ಕಂಥ ಮಠಗಳು ಬಹಳ ಕಡಿಮೆ ನೀವು ಮಠಗಳಿಗೆ ಗೌರವ ಕೊಡಬೇಕಾದರೆ, ಮಠಾಧಿಪತಿಗಳಿಗೆ ಒಳ್ಳೆಯ ಹೆಸರನ್ನು ತರಬೇಕಾದರೆ, ಮಠಾಧೀಶರು ನಿಮ್ಮಲ್ಲಿ ಕೇಳತಕ್ಕಂಥದ್ದು

ಏನೆಂದರೆ ನೀವು ಒಳ್ಳೆಯ ಆಡಳಿತವನ್ನು ರಾಜ್ಯದಲ್ಲಿ ಕೊಡಿ ಎಂದು ಕೇಳತಕ್ಕಂಥದ್ದು. ನಮ್ಮ ಮಠಗಳ, ಮಠಾಧಿಪತಿಗಳ ಹೆಸರನ್ನು ಬಳಸಿ ಕೊಳ್ಳತಕ್ಕಂಥ ಸಂದರ್ಭದಲ್ಲಿ ಜನರಿಗೆ ಮೆಚ್ಚುಗೆ ಆಗುವ ರೀತಿಯಲ್ಲಿ ಸರ್ಕಾರದ ಆಡಳಿತವಿರಬೇಕು. ಒಳ್ಳೆಯ ಸರ್ಕಾರವಿದೆ, ಒಳ್ಳೆಯ ಆಡಳಿತವಿದೆ, ಒಳ್ಳೆಯ ರೀತಿಯಲ್ಲಿ ಜನರ ಬದುಕಿದೆ ಎನ್ನತಕ್ಕಂಥ ರೀತಿಯಲ್ಲಿ ಆಡಳಿತ ನಿಮ್ಮಿಂದ ನಡೆಯಬೇಕು ಎಂದು ಮಠಾಧಿಪತಿಗಳು ಬಯಸತಕ್ಕಂಥದ್ದು. ಅದನ್ನು ಕೊಡಿ ಎಂದು ಅವರು ಹೇಳತಕ್ಕಂಥದ್ದು. ಈಗೆಲ್ಲೋ ಒಂದು ಕಡೆ ನೋಡಿದೆ. 60 ಕೋಟಿ ರೂಪಾಯಿಗಳನ್ನು ಮಠಗಳಿಗೆ ನೀವು ಕೊಟ್ಟಿದ್ದೀರಿ. ಕೆಲವು ಮಠಗಳಿಗೆ 5 ಕೋಟಿ ಕೊಟ್ಟಿದ್ದೀರಿ. ಕೆಲವು ಮಠಗಳ ಆಸ್ತಿ ಪಾಸ್ತಿ ನೋಡಿದರೆ ಎರಡು–ಮೂರು ಸಾವಿರ ಕೋಟಿ ರೂ.ಗಳ ಆಸ್ತಿ ಇರತಕ್ಕಂಥ ಮಠಗಳು ನಿಮ್ಮಿಂದ ಎರಡು ಕೋಟಿ, ಮೂರು ಕೋಟಿ ನಿರೀಕ್ಷೆ ಮಾಡುತ್ತಾರೆಯೆ? ನಿರೀಕ್ಷೆ ಮಾಡುತ್ತಿರುವವರು ನಿಮ್ಮ ಪ್ರಚಾರಕ್ಕೋಸ್ಕರ. ಆದರೆ ಬೇರೆ ಯಾವ ಮಠಗಳವರೂ ನಿಮ್ಮನ್ನು ಹಣ ಕೊಡಿ ಎಂದು ಕೇಳಿಲ್ಲ. ಇವತ್ತು ಮಠಗಳಿಗೆ ಕೋಟ್ಯಾಂತರ ರೂ.ಗಳ ಅನುದಾನವನ್ನು ಕೊಡುತ್ತಿರುವಾಗ ಅದರ ಜೊತೆಗೆ ನಿಮ್ಮ 5 ಕೋಟಿ, ಎರಡು ಕೋಟಿ ಬೇಕಾಗಿಲ್ಲ. ನೀವು ಎಷ್ಟು ಕೋಟಿ ರೂ.ಗಳನ್ನು ಯಾವ ಯಾವ ಮಠಗಳಿಗೆ ನೀವು ಕೊಡುತ್ತೀರೋ, ಅನುದಾನವನ್ನು ಕೊಡತಕ್ಕಂಥದ್ದರ ಬಗ್ಗೆ ಅದು ಸರ್ಕಾರದ ಆದೇಶದ ಪ್ರಕಾರವಾಗಿಯೇ ಆ ಅನುದಾನ ಉಪಯೋಗವಾ ಗುತ್ತಿದೆಯೆ? ಖಂಡಿತ ಇಲ್ಲ. ಅದರ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ಮಠಗಳು, ಮಠಾಧಿಪತಿಗಳು ನಿಮಗೆ ಹಣವನ್ನು ಕೇಳುವುದಿಲ್ಲ. ಆದರೆ ನೀವು ಇವತ್ತು ಮಠಗಳಿಗೆ 60 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು. ಈಗ ನೀವು ಒಂದು ಕಡೆ ಹೇಳುತ್ತೀರಿ, ಕರ್ನಾಟಕದಲ್ಲಿ ಒಂದು ಶತಮಾನದಲ್ಲಿಯೇ ಕಂಡರಿಯದ ಜಲಪ್ರಳಯವಾಗಿದೆಯೆಂದು, ಈ ರೀತಿ ಹೇಳಿ ಸರ್ಕಾರದ ಕಾರ್ಯಕ್ರಮ ದಿಂದ ಹಿಡಿದು ಸಾರ್ವಜನಿಕ ಕಾರ್ಯಕ್ರಮಗಳೆಲ್ಲವೂ ಕೂಡ ಯಾವುವು ಅದ್ದೂರಿಯಾಗಿ ನಡೆಯಬಾರದು ಎಂದು ಸರ್ಕಾರದ ಸಂದೇಶವನ್ನು ಹೇಳುತ್ತೀರಿ. ಯಾವ ಕಾರ್ಯಕ್ರಮವೂ ಅದ್ದೂರಿಯಾಗಿ ನಡೆಯಬಾರದು, ಜನರು ಜಲಪ್ರಳಯದಿಂದ ತತ್ತರಿಸಿ ಹೋಗಿದ್ದಾರೆ. ಇನ್ನೂ ಕೂಡ ಆ ಪ್ರದೇಶಗಳಲ್ಲಿ ಗಂಜಿ ಕೇಂದ್ರಗಳು ಇದ್ದು ಜನರು ಶೆಡ್‌ಗಳಲ್ಲಿ ಇದ್ದಾರೆ, ಆ ಜನರಿಗೆ ಸರಿಯಾದ ಪುನರ್ವಸತಿಯಾಗಿಲ್ಲ, ಜನರು ನರಳುತ್ತಿದ್ದಾರೆಯಾದ

ಕಾರಣ ನಮಗೆ ಅದ್ದೂರಿ ಕಾರ್ಯಕ್ರಮಗಳು ಬೇಡವೆಂದು ಹೇಳುತ್ತೀರಿ. ಈ ರೀತಿ ಬೇಡವೆಂದು ಹೇಳಿ ನೀವು ಕೃಷ್ಣದೇವರಾಯನ ಪಟ್ಟಾಭಿಷೇಕ ಮಾಡುತ್ತೀರಿ. ಅದನ್ನು ನೀವು ಮುಂದಕ್ಕೆ ಹಾಕುವುದಕ್ಕೆ ಆಗುತ್ತಿರಲಿಲ್ಲವೆ? ಇದಕ್ಕಾಗಿ ನೀವು 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಒಂದು ಕಡೆ ನೀವೇ ಹೇಳುತ್ತೀರಿ, ಅದ್ದೂರಿ ಕಾರ್ಯಕ್ರಮಗಳು ಬೇಡ, ಸರಳವಾದ ಕಾರ್ಯಕ್ರಮಗಳನ್ನು ನಡೆಸಿ, ಜನರು ಇವತ್ತು ನೊಂದು ಬೆಂದು ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದ್ದೀರಿ. ಆದರೆ ನೀವು ಕೃಷ್ಣದೇವರಾಯನ ಪಟ್ಟಾಭಿಷೇಕಕ್ಕೆ 30 ಕೋಟಿ ರೂ.ಗಳನ್ನು ಮತ್ತು ಮಠಗಳಿಗೆ 60 ಕೋಟಿ ರೂ.ಗಳನ್ನು ಕೊಡುತ್ತೀರಿ. ಸ್ವಾಮಿ ನಾನು ಕೇಳತಕ್ಕಂಥದ್ದು, ನಿಮ್ಮ ಬಜೆಟ್ ನಲ್ಲಿಯೇ ಹೇಳಿದ್ದೀರಲ್ಲ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಸಹ ಕಾರ್ಯಕರ್ತರ ಬಗ್ಗೆ ಏನು ಹೇಳಿದ್ದೀರೆಂದರೆ, ಅವರು ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ಪೆನ್‌ಶನ್ ಇಲ್ಲ, ಪೆನ್‌ಶನ್ ಅನ್ನು ಕೊಡೋಣ ಎನ್ನತಕ್ಕಂಥ ರೀತಿಯಲ್ಲಿ ತಾವು ಅಂಗನವಾಡಿ ಕಾರ್ಯಕರ್ತರಿಗೆ 150 ರೂ.ಗಳನ್ನು ಅವರ ಸಂಬಳದಲ್ಲಿಯೇ ಹಿಡಿದು ಕೊಳ್ಳುವುದು ಎನ್ನಲಾಗಿದೆ. ಆ ಹಣಕ್ಕೆ ಸರ್ಕಾರ 150 ರೂ.ಗಳನ್ನು ಸೇರಿಸಿ ಅದ್ನು ಸೇರಿಸಿ ಅವರು ನಿವೃತ್ತಿಯಾದ ಮೇಲೆ ಅವರಿಗೆ ಪೆನ್‌ಶನ್‌ನ್ನು ಕೊಡತಕ್ಕಂಥದ್ದು. ಸಹಾಯಕ ಕಾರ್ಯಕರ್ತರಿಗೆ 75 ರೂ.ಗಳನ್ನು ಅವರ ಸಂಬಳದಲ್ಲಿಯೇ ಹಿಡಿಯುವುದು. ನಾವು ಇವರಗೆ ಎಷ್ಟು ಸಂಬಳವನ್ನು ಕೊಡುತ್ತಿದ್ದೇವೆ? ನಾನು ಇದನ್ನು ಏಕೆ ಹೇಳಿದೇನೆಂದರೆ, ಮಠಗಳಿಗೆ ಕೊಡುವಂಥ 60 ಕೋಟಿ ರೂ.ಗಳು ಮತ್ತು ಕೃಷ್ಣದೇವರಾಯನ ಪಟ್ಟಾಭಿಷೇಕಕ್ಕೆ 30 ಕೋಟಿ ರೂಪಾಯಿ, ಹೀಗೆ ಒಟ್ಟು 90 ಕೋಟಿ. ಪಾಪ ಈ ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕ ಕಾರ್ಯಕರ್ತರ ಗೌರವಧನವನ್ನು ಹೆಚ್ಚು ಮಾಡಿ ಪೆನ್‌ಶನ್ ಕೊಡಬಹುದಾಗಿತ್ತು. ಅದನ್ನು ಬಿಟ್ಟು 150 ರೂಪಾಯಿ ಹಿಡಿದುಕೊಳ್ಳುತ್ತೀರಿ ಎಂದಿದ್ದೀರಿ. ಪಾಪ ಅವರಿಗೆ ನೀವು ಕೊಡುವ ಗೌರವಧನವೇ ಹೊಟ್ಟೆಗೆ ಸಾಲದಾಗಿದೆ. ನಾನು ಇದನ್ನೇ ಹೇಳಿದ್ದು ಅಂತ್ಯೋದಯ ಎಂದರೆ ಎಲ್ಲಿ ಬ್ರೇಕ್ ಆಗಿದೆಯೆಂದು. ಇವರ ಬಗ್ಗೆ ನೀವು ಯೋಚನೆ ಮಾಡಬೇಕಾಗಿತ್ತಲ್ಲವೆ? ಅಂಗನವಾಡಿ ಕಾರ್ಯಕರ್ತರಿಗೆ ಪೆನ್‌ಶನ್ ಕೊಡಬೇಕಾದರೆ ಅವರು ಕಟ್ಟಬೇಕಾದ ಹಣವನ್ನು ನೀವು ತುಂಬಿ ಅವರಿಗೆ ಬರತಕ್ಕಂಥ ಸಂಬಳದಲ್ಲಿ ನೀವು ಹಿಡಿಯುವುದು. ನೀವು ಅವರ ಗೌರವಧನವನ್ನು ಜಾಸ್ತಿ ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀನಿವಾಸ್ ಪ್ರಸಾದ್‌ರವರು ಬಜೆಟ್ ಮೇಲೆ ಉತ್ತಮವಾದ ಬೆಳಕನ್ನು ಚೆಲ್ಲಿ ಚರ್ಚೆ ಮಾಡುತ್ತಿದ್ದಾರೆ. ಆದರೆ ಸರ್ಕಾರದ ಕಡೆ ಮುಂದಿನ ಸಾಲಿನಲ್ಲಿ ಒಬ್ಬ ಸಚಿವರೂ ಕೂಡ ಇಲ್ಲ. ಅಂದರೆ ನೋಡಿ, ಇವರಿಗೆ ಬಜೆಟ್ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಎಷ್ಟರಮಟ್ಟಿಗೆ ಆಸಕ್ತಿ ಇದೆಯೆಂದು. ಬಜೆಟ್ ಮೇಲೆ ಚರ್ಚೆ ಆಗುವಾಗ ಹಣಕಾಸಿನ ಸಚಿವರಾದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತು ತಾಳ್ಮೆಯಿಂದ ಏನು ಚರ್ಚೆಯಲ್ಲಿ ಮಾತನಾಡುತ್ತಾರೆ ಎಂಬುದನ್ನು ಅವರು ನೋಡಬೇಕಾಗಿತ್ತು. ಅವರೇನಾದರೂ ಬಸವರಾಜ ಬೊಮ್ಮಾಯಿಯವರಿಗೆ Authorize ಮಾಡಿದ್ದಾರೇನೋ ನನಗೆ ಗೊತ್ತಿಲ್ಲ. ಬಸವರಾಜ ಬೊಮ್ಮಾಯಿಯವರೆ, ತಾವೇನಾದರು Authorization ತೆಗೆದುಕೊಂಡಿದ್ದೀರ?

ಶ್ರೀ ಶ್ರೀನಿವಾಸ ಪ್ರಸಾದ್ : ಅವರೇ ನೇಮಕ ಮಾಡಿರಬೇಕು. ಅವರ ಕಡೆ ಯಾರಾದರು ಇರಬೇಕು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಯಾರಿಗೂ ಸರಿಯಾದಂಥ ರೀತಿಯಲ್ಲಿ ಹಣವನ್ನು ಕೊಡಲಿಲ್ಲ. ಇವರಿಗೂ ಕೊಡಲಿಲ್ಲ. ಬಸವರಾಜ ಬೊಮ್ಮಾಯಿಯವರಿಗೂ ಕೊಡಲಿಲ್ಲ. ಕೃಷಿಗೂ ಕೊಡಲಿಲ್ಲ, ಪಶುಸಂಗೋಪನೆಗೂ ಕೊಡಲಿಲ್ಲ. ಇವರಿಗ್ಯಾರಿಗೂ ಸರಿಯಾಗಿ ಹಣ ಕೊಟ್ಟಿಲ್ಲವಾದ ಕಾರಣ ಇವರೆಲ್ಲರಿಗೂ ಆಸಕ್ತಿ ಹೊರಟುಹೋಗಿದೆ ಪಾಪ. ಆ ಆಸಕ್ತಿ ಹೊರಟುಹೋಗಿ ಒಬ್ಬರೂ ಕೂಡ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಾಗಿಲ್ಲ ಮತ್ತು ಒಬ್ಬರೂ ಕೂಡ ಒಂದು ನೋಟ್ ಮಾಡಿಕೊಳ್ಳುವುದಿಲ್ಲ. ಹಿರಿಯ ಸದಸ್ಯರಾದ ಶ್ರೀನಿವಾಸಪ್ರಸಾದ್‌ರವರು ಬಜೆಟ್ ಮೇಲೆ ಭಾಷಣ ಮಾಡುತ್ತಿದ್ದಾರೆ, ಯಾರಾದರೂ ಕುಳಿತುಕೊಂಡು ಅದಕ್ಕೆ ಉತ್ತರ ಕೊಡಬೇಕು, ಈ ಸದನದ ಮೂಲಕ ಜನರಿಗೆ ಹೇಳಬೇಕು, ನಾವು ತೆರಿಗೆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತೇವೆ ಮತ್ತು ಯಾವ ರೀತಿಯಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದೇವೆ ಮತ್ತು ರಾಜ್ಯದಲ್ಲಿ ಏನಾಗುತ್ತಿದೆ ಎಂಬ ಬಗ್ಗೆ ಇಡೀ ರಾಜ್ಯದ ಜನರಿಗೆ ಈ ಸದನದ ಮೂಲಕ ಅವರು ಉತ್ತರ ಕೊಡಬೇಕಾಗುತ್ತದೆ. ಈ ರೀತಿಯ ಜವಾಬ್ದಾರಿ ಇರಬೇಕು. ಆದರೆ ಆ ಜವಾಬ್ದಾರಿ ಒಬ್ಬ ಮಂತ್ರಿಗೂ ಇಲ್ಲ. ಒಬ್ಬ ಮಂತ್ರಿಯೂ ಕೂಡ ಮುಂದುಗಡೆ ಇಲ್ಲಿ ಕುಳಿತುಕೊಳ್ಳುವುದಿಲ್ಲ.

(12.30 PM)

ಹಣಕಾಸಿನ ಸೆಕ್ರೆಟರಿಗಳು ಒಬ್ಬರೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅಧಿಕಾರಿಗಳು ಇಲ್ಲ.

ಶ್ರೀ ಸಿದ್ಧರಾಮಯ್ಯ : Principal Secretary ಇಲ್ಲ. ಅಲ್ಲಿ ನೋಡಿ Finance Department ನವರು ಎಲ್ಲಿದ್ದಾರೆ?

ಶ್ರೀ ಬಸವರಾಜ್ ಬೊಮ್ಮಾಯಿ : ಅಜೆಂಡಾದಲ್ಲಿ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗಾಗಲೇ ಅರ್ಧ ಗಂಟೆ ಆಯಿತಲ್ಲ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಅಜೆಂಡಾದಲ್ಲಿ financial discusion ಇದೆ.

ಶ್ರೀ ಬಸವರಾಜ್ ಬೊಮ್ಮಾಯಿ : ಇದೆ. ಒಂದು ನಿಮಿಷ ಕೇಳಿ.

CHAIRMAN : Finance ನವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ : Finance ನವರು ಎಲ್ಲಿದ್ದಾರೆ? Secretary ಎಲ್ಲಿದ್ದಾರೆ? ಅಲ್ಲಿ ಯಾರೋ Under Secretary ಗಳು ಇರಬೇಕು ಅಷ್ಟೇ.

ಶ್ರೀ ಬಸವರಾಜ್ ಬೊಮ್ಮಾಯಿ : ಈಗ ಬಿಲ್ ಬಗ್ಗೆ discussion ಆಗುವ ಸಮಯ. ಆದರೆ ಅದರ ಬದಲು ಬಜೆಟ್ ಮೇಲೆ ಚರ್ಚೆ ಪ್ರಾರಂಭವಾಗಿದ್ದರಿಂದ ಕರೆಸುತ್ತೇವೆ.

CHAIRMAN : Secretary ಯವರನ್ನು ಕರೆಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವಾಗ ಎಲ್ಲಾ tax yielding departments ಗಳೆಲ್ಲ ಇರಬೇಕು. Motor Vehicle Tax, Commercial Tax, Stamps and Registration, excise ನಿಂದ 6.500 ಯಿಂದ 7,000 ಕೋಟಿ ರೂಪಾಯಿ tax ಬರುತ್ತದೆ. Stamps and Registration ನಿಂದ ಎರಡೂವರೆ ಕೋಟಿ ರೂಪಾಯಿ ಬರುತ್ತದೆ. At least ಅವರಾದರೂ ಬರೆದುಕೊಳ್ಳಬೇಕಲ್ಲ. ಅವರು ಏನು ಸಲಹೆ ಕೊಡುತ್ತಾರೆ ಅದನ್ನು note down ಮಾಡಿಕೊಂಡು ನಾಳೆ ಉತ್ತರ ಬರೆದು ಕೊಡುವವರು ಅವರೇ ಅಲ್ಲವೇ? ಆ Department ನವರು ಇಲ್ಲದೆ ನೀವು ಏನು ಉತ್ತರ ಕೊಡುತ್ತೀರಿ?

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ವಿರೋಧ ಪಕ್ಷದ ನಾಯಕರು ಮೊನ್ನೆ ಸುದೀರ್ಘವಾಗಿ ಏನು ಮಾತನಾಡಿದ್ದಾರೆ, ಅದನ್ನು ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅದೇ ರೀತಿ ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಪೀಠಿಕೆ ಹಾಕುತ್ತಿದ್ದಾರೆ. ಅವರು ಇನ್ನೂ ಬಜೆಟ್ ವಿಷಯಕ್ಕೆ ಬಂದಿಲ್ಲ. ಅವರು ಏನು ಮಾತನಾಡುತ್ತಾರೆ ಅದನ್ನು note down ಮಾಡಿ ಖಂಡಿತವಾಗಿ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇವೆ.

SRI SIDDARAMAIAH : You are a senior Member. ಆ ತರಹ ಹೇಳುವುದಕ್ಕೆ ಬರುವುದಿಲ್ಲ.

CHAIRMAN : ಹಣಕಾಸು ಇಲಾಖೆಯವರು ಇಲ್ಲ. ನೀವು ಹಣಕಾಸು ಇಲಾಖೆಯವರನ್ನು ಕರೆಸಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅಧಿಕಾರಿಗಳಿಗೆ summon ಮಾಡುತ್ತೇನೆ. ನೀವು ಹೇಳುವುದನ್ನು note down ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತೇವೆ. ಸರಿಯಾದ ಉತ್ತರವನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಯಿತು, ಈಗ ಯಾರು ಬರೆದುಕೊಂಡಿದ್ದಾರೆಂದು ತೋರಿಸಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅವರು ಇನ್ನು ಪೀಠಿಕೆಯನ್ನು ಹಾಕುತ್ತಿದ್ದಾರೆ, ಇನ್ನು ಮಠಗಳ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರು ಬಜೆಟ್ ವಿಷಯಕ್ಕೆ ಬಂದಿಲ್ಲ, ಬಜೆಟ್ ವಿಷಯಕ್ಕೆ ಬಂದಾಗ ನಾವು note down ಮಾಡುತ್ತೇವೆ. ಉತ್ತರ ಕೊಡುತ್ತೇವೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಬಸವರಾಜ್ ಬೊಮ್ಮಾಯಿಯವರೇ, ನೀವು ಮೊದಲಿನ ತರಹ ಇಲ್ಲ, ಈಗ ನೀವು ಬಹಳ ಬದಲಾವಣೆಯಾಗಿ ಬಿಟ್ಟಿದ್ದೀರಿ.

ಶ್ರೀ ಬಸವರಾಜ್ ಬೊಮ್ಮಾಯಿ : ಇಲ್ಲ ಸಾರ್. ನೀವು ಮಾತನಾಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ನಾನು ತಮಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚು ಮಾಡಿ ಎಂದು ಹೇಳುತ್ತಿದ್ದೆನು. ಅದು ಅವರ loudable demand ಇದೆ. ಎಷ್ಟೋಂದು ಸಂಘಟನೆಗಳಾಗಿ ಅವರ ನೋವನ್ನು ತೋಡಿಕೊಳ್ಳುತ್ತಿದ್ದಾರೆ. ಎಷ್ಟೋಂದು ರೀತಿಯಲ್ಲಿ ಅವರು

ಸರ್ಕಾರದ ಗಮನವನ್ನು ಸೆಳೆಯುತ್ತಿದ್ದಾರೆ. ಅವರಿಗೆ ಗೌರವಧನವನ್ನು ಹೆಚ್ಚು ಮಾಡಿ. ಅವರಿಗೆ pension ಕೊಡಬೇಕಾಗಿರುವುದರ ಕಡೆಗೆ 75 ಅಥವಾ 150 ರೂಪಾಯಿಗಳನ್ನು ಹಿಡಿದುಕೊಂಡಿದ್ದರೆ ಸರಿ ಇರುತ್ತಿತ್ತು. ಅವರ ಸಂಬಳದಲ್ಲಿ ತೆಗೆದುಕೊಂಡು ಆಮೇಲೆ ಅದಕ್ಕೆ ಸೇರಿಸಿ pension ಕೊಡುತ್ತೇವೆಂದು ಹೇಳುತ್ತೀರಿ. ನೀವು ಸ್ವಲ್ಪ ಯೋಚನೆ ಮಾಡಿ. ಅದಕ್ಕೆ ನಾನು ಗಾಂಧೀಜಿ ಯವರ ಅಂತ್ಯೋದಯ ಎಂದು ಅದಕ್ಕೋಸ್ಕರ ಹೇಳಿರತಕ್ಕಂಥಾದ್ದು. ಅಶಕ್ತರಿಗೆ ಅಸಹಾಯಕರಿಗೆ ನೀವು...

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಅಂಗನವಾಡಿ ಕಾರ್ಯಕರ್ತೆಯರ ಮನವಿಯನ್ನು ನಾವು ಮನ್ನಣೆ ಮಾಡಿದ್ದೇವೆ. ಅವರೇ ಸೂಚಿಸಿದಂತಹ ಮಾರ್ಗಸೂಚಿಯನ್ವಯ ನಾವು ಕ್ರಮ ತೆಗೆದುಕೊಂಡಿದ್ದೇವೆ. ಆದರೆ ತಾವು ಗೌರವಧನದ ಬಗ್ಗೆ ತಾವು ಮಾತನಾಡಿರುವುದಕ್ಕೆ ನಮ್ಮ ಅಭ್ಯಂತರ ಇಲ್ಲ. pension ವಿಚಾರದಲ್ಲಿ ಅವರು ಕೊಟ್ಟಂತಹ ಬೇಡಿಕೆಯನ್ನು ನಾವು ಮನ್ನಣೆ ಮಾಡಿದ್ದೇವೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ನಮಗೆ ಎಲ್ಲರಿಗೂ ಕೂಡ ಗೊತ್ತಿದೆ. ಪೌರ ಕಾರ್ಮಿಕರ ಬಗ್ಗೆ ಹೇಳುವುದಾದರೆ ಮೊನ್ನೆ ಯಾರೋ ಪೊರಕೆ ಹಿಡಿದುಕೊಂಡು ಕುಳಿತಿದ್ದರು. ಪಾಪ ಅವರು ನೊಂದಿರತಕ್ಕಂಥವರು. ಬೆಂಗಳೂರಿನಲ್ಲಿ ಅವರಿಗೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೊಡುತ್ತಾರೆ. ಒಂದು ಬಜೆಟ್ ಮಂಡಿತಕ್ಕಂಥವರು ನಾನು ಅನೇಕ ಸಾರಿ I have been repeatedly telling, ಎಲ್ಲಿಯವರೆಗೆ ನಮ್ಮ ಜನ ಪ್ರತಿನಿಧಿಗಳಿಗೆ ಆಡಳಿತ ನಡೆಸುವವರಿಗೆ ಮಾನವೀಯ ಗುಣಗಳು, human qualities ಇರುವುದಿಲ್ಲವೋ, ಆಗ ನಾವು ಎಲ್ಲಿ ಮೈಮರೆಯುತ್ತೇವೆ, ಯಾವುದರ ಬಗ್ಗೆ ಯೋಚನೆ ಮಾಡುತ್ತೇವೆನ್ನುವುದರ ಬಗ್ಗೆ ನಾನು ಆಗಲೇ ಹೇಳಿದೆ. ಇದನ್ನು ಮರೆತು ಸರ್ವೋದಯದ ಬಗ್ಗೆ ಚಿಂತನೆ ಮಾಡುವುದು. ಮಠಗಳು, ಮಠಾಧಿಪತಿಗಳು ಕೃಷ್ಣದೇವರಾಯನ ಪಟ್ಟಾಭಿಷೇಕ, ಇನ್ನು ಮುಂದೆ ಹೇಳುತ್ತೇನೆ, ಎಷ್ಟು universities ಕೊಟ್ಟಿದ್ದೀರೆಂದರೆ 15-16 universities ಈಗ ಮಾಡಿಕೊಳ್ಳುತ್ತಿದ್ದೀರಿ. ನಾನು ಹೇಳುವಂತಾದ್ದು ಗುತ್ತಿಗೆದಾರರ ವಿಚಾರ. ನಾನು ಕಳೆದ ಬಾರಿ ಬಜೆಟ್ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದೆ. ಈ ಕೆಲಸವನ್ನು sweeping community ಯವರನ್ನು ಬಿಟ್ಟು ಸಮಾಜದಲ್ಲಿ ಬೇರೆಯವರು ಯಾರಾದರೂ

ಮಾಡುವುದಕ್ಕೆ ಆಗುತ್ತದೆಯೇನು? ಅವರನ್ನು contract basis ಮೇಲೆ ತೆಗೆದುಕೊಳ್ಳುತ್ತೀರಲ್ಲ, ಅವರಿಗೆ ಕೇಂದ್ರ ಸರ್ಕಾರದ ದಿನಗೂಲಿ ನಿಯಮದ ಪ್ರಕಾರ ಏನಾದರೂ ಹಣವನ್ನು ಕೊಡುತ್ತಿದ್ದೀರಾ? ಅವರಿಗೆ ಕೊಡುತ್ತಿರ ತಕ್ಕಂಥಾದ್ದು ಕೇವಲ 70 ರೂಪಾಯಿ ಮಾತ್ರ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಷ್ಟೇ ಅಲ್ಲ, ಎಲ್ಲಾ ಕಡೆ ಇದೇ ರೀತಿ ಆಗುತ್ತಿದ್ದು ಅವರ ಶೋಷಣೆ ಹೇಗೆ ನಡೆಯುತ್ತಿದೆ ಎಂದು ಹೇಳುತ್ತಿದ್ದೇನೆ. ಅವರಿಗೆ ಹಬ್ಬ ಹರಿದಿನಗಳಲ್ಲಿ ರಜಾ ಇಲ್ಲ, ಒಂದು ದಿನ ಅವರು ಉಳಿದುಕೊಂಡರೆ ಎರಡು ದಿನ ಸಂಬಳ ಇಲ್ಲ. ಅವರು ಕೆಲಸಗಳು ಯಾವ ರೀತಿ ಮಾಡುತ್ತಾರೆಂದು ತಮಗೆ ಗೊತ್ತಿದೆ, ಅವರಿಗೆ hand gloss ಮತ್ತು ಪಾದರಕ್ಷೆಗಳು ಇಲ್ಲ. ಅವರು ತಮ್ಮ ನೋವನ್ನು ಹೇಗೆ ತೋಡಿಕೊಂಡಿದ್ದಾರೆ. ಅವರು ಇಡೀ ತಿಂಗಳು ಬೆಂಗಳೂರು ನಗರದಲ್ಲಿ ದುಡಿದರೆ ಅವನ ಕೈಗೆ ಎರಡು ಸಾವಿರ ರೂಪಾಯಿ ಸಿಗಬಹುದು. Minimum wages ನಲ್ಲಿ ಕೊಟ್ಟರೆ ಅವರಿಗೆ 6,000 ರಿಂದ 7,000 ಸಿಗುತ್ತದೆ. ಅಷ್ಟು ದುಡ್ಡನ್ನು ನಾವು ಗುತ್ತಿಗೆದಾರರಿಗೆ ಕೊಡುತ್ತೇವೆ. ಆದರೆ ಆ ಹಣ ತಲುಪುತ್ತಿಲ್ಲ. ಗುತ್ತಿಗೆದಾರರ ಬದಲು ಯಾವ ಈ ಪೌರ ಕಾರ್ಮಿಕರು ದುಡಿಯುತ್ತಾರೆ, ಅವರಿಗೆ permanent job ಕೊಡಬೇಕು, ಗುತ್ತಿಗೆಗೆ ಕೊಡಬಾರದು. ಮೊದಲ ಆದ್ಯತೆಯನ್ನು ನಾವು ಅವರಿಗೆ ಕೊಡಬೇಕು, ಇವತ್ತು ನಾವು ಅವರ ಬಗ್ಗೆ ಯೋಚನೆಯನ್ನು ಮಾಡಬೇಕಾಗಿ ರತಕ್ಕಂಥ ಅವಶ್ಯಕತೆ ಇದೆ. ನಾನು ನೋಡಿದ ಪ್ರಕಾರ ಕಳೆದ ಸಾರಿ ಕೂಡ ಬಜೆಟ್‌ನಲ್ಲಿ ಪೌರ ಕಾರ್ಮಿಕರ ಬಗ್ಗೆ ಯೋಚನೆ ಮಾಡಿಲ್ಲ. Though they are in the Scheduled Caste, Scheduled Caste is also in list of caste. ಮುಂದುವರೆದಂತಹವರು ಕೂಡ ವಿದ್ಯೆ, ಬುದ್ಧಿ, ಅಧಿಕಾರ-ಅಂತಸ್ತು ಇದ್ದಂತಹವರು ಇದ್ದೇವೆ. ಆದರೆ ಆ ಜನಾಂಗದಲ್ಲಿ ಇಲ್ಲ. 101 Schedule Caste ನಲ್ಲಿ ಉಪಜಾತಿಗಳು ಇವೆ, ಇವರು ಸಮಾಜದಲ್ಲಿ ಬಹಳ ಅತ್ಯಂತ ಕೆಳಸ್ತರದಲ್ಲಿ ಶೋಚನೀಯವಾಗಿರುವವರು. ಮಾನ್ಯ ಬಸವರಾಜ್ ಬೊಮ್ಮಾಯಿಯವರಿಗೆ ಗೊತ್ತಿದೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿ 3-5 ಮನೆಗಳಿರುತ್ತವೆ. ಅವರಿಗೆ ಎಲ್ಲಾದರೂ ಆಶ್ರಯ ಯೋಜನೆಯಲ್ಲಿ ಒಂದು ಮನೆ ಅಥವಾ ನಿವೇಶನ ಕೊಟ್ಟಿದ್ದೇವೆಯೇ? ನಾನು ಕೆಡಿಪಿ ಮೀಟಿಂಗ್‌ನಲ್ಲಿ ಮಾತನಾಡುತ್ತಾ ಹೇಳಿದೆ. ನಮ್ಮ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಪೌರಕಾರ್ಮಿಕರಿದ್ದಾರೆ ಅವರನ್ನು ಯಾರೂ ಕೇಳುವುದೇ

ಬೇಡವೇ? ಕಡ್ಡಾಯವಾಗಿ ಅವರಿಗೆ ಒಂದು ಆಶ್ರಯ ಯೋಜನೆಯಲ್ಲಿ ಒಂದು ಮನೆ, ಅವರಿಗೆ ಕುಡಿಯುವ ನೀರು ಇದೆಯೋ ಇಲ್ಲವೋ, ಅವರು ಒಳ್ಳೆಯ ಪರಿಸರದಲ್ಲಿ ಬದುಕುತ್ತಿದ್ದಾರೋ ಇಲ್ಲವೋ, ಪಂಚಾಯಿತಿಯಿಂದ ಅವರಿಗೆ ಸಂಬಳ ಕೊಡುತ್ತಿದ್ದಾರೋ ಇಲ್ಲವೋ, ಎನ್ನುವುದನ್ನು ಯೋಚನೆ ಮಾಡುವುದು ಬೇಡವೇನು? ಅವರು ಬಹಳ ನಿರ್ಗತಿಕರಾಗಿರತಕ್ಕಂಥವರು. ಅವರಿಗೆ ವಿಶೇಷವಾಗಿ ಆರ್ಥಿಕ ಸೌಲಭ್ಯವನ್ನು Special Component Plan ನಲ್ಲಿ ಅವರಿಗೆ ಕೊಡಿ ಎಂದು ಹೇಳುತ್ತೇನೆ. ಪರಿಶಿಷ್ಟ ಜಾತಿಗೆ ವಿಶೇಷ ಘಟಕ ಯೋಜನೆ ಏನಿದೆ ಅದರಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿರುವುದರಲ್ಲಿ ನಮಗೆ ಮತ್ತು ರೇವು ನಾಯಕರಿಗೆ ಮಾತ್ರ ಕೊಡತಕ್ಕಂಥಾದ್ದಲ್ಲ. ನಮ್ಮ ಜೊತೆಯಲ್ಲಿರತಕ್ಕಂಥವರು, ನಮಗಿಂತಲೂ ಅಶಕ್ತರಾಗಿರತಕ್ಕಂಥವರು, ನಮ್ಮಿಂದ ತುಳಿತಕ್ಕೊಳಗಾಗಿರುವಂಥವರು, ಶೋಷಿತರಲ್ಲಿ ಶೋಷಿತರಾಗಿರತಕ್ಕಂಥವರು, ಬಡವರಲ್ಲಿ ಬಡವಾಗಿರ ತಕ್ಕಂಥವರು, ಅವಮಾನಿತರಲ್ಲಿ ಅವಮಾನಿತರಾಗಿರುವಂತಹ ಜನಾಂಗದ ಬಗ್ಗೆ ಯೋಜನೆ ಮಾಡುವುದು ಬೇಡ. ಇವತ್ತು ಮೈಸೂರು ಮಹಾನಗರ ಪಾಲಿಕೆ ಮತ್ತು ಎಲ್ಲಾ ಕಡೆ ಅವರನ್ನು ಗುತ್ತಿಗೆದಾರರ ಕಪಿಮುಷ್ಟಿಯಲ್ಲಿ ಕೊಟ್ಟುಬಿಟ್ಟು ಅವರಿಗೆ ಎಂತಹ ಶೋಷಣೆ, ನರಕಸದೃಶ್ಯವಾದಂತಹ ಜೀವನ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಬಜೆಟ್ ಮಂಡಿಸುವಾಗ ಯೋಚನೆ ಮಾಡಿ. ಅವರು ಸಮಾಜದಲ್ಲಿ ಕೆಳಸ್ತರದಲ್ಲಿ ಇರತಕ್ಕಂಥವರು, ಅಂತ್ಯೋದಯ ಎನ್ನುವುದು ಅವರಿಗೆ ತಲುಪತಕ್ಕಂಥಾದ್ದು, ಅಲ್ಲಿ ಗಾಂಧೀಜಿಯ ಚಿಂತನೆ ಇರುವಂತಾದ್ದು. ಬಹುಶಃ ಇದರ ಬಗ್ಗೆ ನಾನು ನೋಡಿದಂತಹ ಸಮಯದಲ್ಲಿ ಗುತ್ತಿಗೆದಾರರು ಇದ್ದರೂ ಕೂಡ ತಾವು ಗಮನ ಹರಿಸಿ ಅವರಿಗೆ ಯಾವುದೇ ರೀತಿಯಲ್ಲಿ ಪೌರ ಕಾರ್ಮಿಕರ ಮೇಲೆ ಶೋಷಣೆಯಾಗಬಾರದು, ಅವರೂ ಕೂಡ ಆರ್ಥಿಕವಾಗಿ ಸಬಲರಾಗಬೇಕು, ಅವರ ಮಕ್ಕಳಿಗೂ ಕೂಡ ಶಿಕ್ಷಣ ಸಿಗಬೇಕು, ಅವರೂ ಕೂಡ ಒಳ್ಳೆಯ ಬದುಕನ್ನು ನಡೆಸತಕ್ಕಂಥ ರೀತಿಯಲ್ಲಿ ಅವರಿಗೆ ನಾವು ಅವಕಾಶಗಳನ್ನು ಕೊಡಬೇಕೆಂದು ಹೇಳುತ್ತೇನೆ. ನಾನು ಏಕೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪೌರಕಾರ್ಮಿಕರ ಬಗ್ಗೆ ಹೇಳುತ್ತೇನೆ ಎಂದರೆ ಇವರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಕೆಲವೊಂದು ಬೇಡದೆ ಇದ್ದಂತಹವರಿಗೆ ಕೋಟಿ ಕೋಟಿ ಹಣ ಚೆಲ್ಲುತ್ತೇವಲ್ಲ, ಆದುದರಿಂದ ಸ್ವಲ್ಪ ಈ ಕಡೆ ಗಮನವನ್ನು ಹರಿಸಿ, ಏಕೆ ಆಗುವುದಿಲ್ಲ.? ಇನ್ನು ಮಧ್ಯಾಹ್ನದ ಬಿಸಿಯೂಟದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಅಲ್ಲಿ ಕೆಲಸ

ಮಾಡುವವರಿಗೆ ಬಹಳ ಕಡಿಮೆ ಸಂಬಳ ಅವರಿಗೆ ಕೊಡತಕ್ಕಂಥಾದ್ದು ಇದೆ. ಆ ರೀತಿ ಕೆಲಸ ಮಾಡುವವರೆಲ್ಲ ಕೂಡ, ಪಾಪ ಅವರು ಅದರಲ್ಲಿ ದುಡಿದು ಬದುಕುವವರು. ಅವರ ಬಗ್ಗೆ ಕೂಡ ನೀವು ಗಮನ ಕೊಡಬೇಕೆಂದು ಹೇಳುತ್ತೇನೆ. ಒಟ್ಟಾರೆ Financial discipline ಬಗ್ಗೆ ಮಾನ್ಯ ಸಿದ್ಧರಾಮಯ್ಯ ನವರು ಈ ಸರ್ಕಾರದಲ್ಲಿ ಹಣಕಾಸಿನ ಶಿಸ್ತು ಇರಬೇಕು, ಅದನ್ನು ನಾವು ಕಾಣುತ್ತಿಲ್ಲವೆಂದು ಹೇಳುತ್ತಿದ್ದರು. ನಾನು 1989ರಲ್ಲಿ ಮೂರನೇ ಬಾರಿಗೆ Parliament ಗೆ ಆಯ್ಕೆಯಾದಂತಹ ಸಂದರ್ಭದಲ್ಲಿ ಮಾನ್ಯ ವಿರೇಂದ್ರ ಪಾಟೀಲರು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ ನೋಡಿದ್ದೆನು. ನಾನು ಒಂದು ದಿನ ಅವರ ಜೊತೆಯಲ್ಲಿ ಪ್ರವಾಸ ಮಾಡಿದೆನು ಆಗ ಅವರು ಹಣಕಾಸಿನ ಖಾತೆಯನ್ನು ಇಟ್ಟುಕೊಂಡಿದ್ದು, ಇನ್ನು ಯಾವುದೇ ಖಾತೆಯನ್ನು ಇಟ್ಟುಕೊಂಡಿರಲಿಲ್ಲ. ನಾನು ಈಗ ಸಮಾಜದ ಕೆಳಸ್ತರದಲ್ಲಿ ಇರುವಂತಹ ಜನರ ಬಗ್ಗೆ ಏನು ಮಾತನಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳನ್ನು ಅಂತಹ ಒಂದು ಕಾರ್ಯಕ್ರಮಕ್ಕೆ ಕರೆದುಕೊಂಡು ಹೋದೆನು. ನಾನು ಅಲ್ಲಿ ಒಂದು ಪ್ರಾಸ್ತಾವಿಕ ಭಾಷಣ ಮಾಡಿ ಅವರ ಗಮನ ಸೆಳೆದೆ. ಈ ಸಮಾಜದ ಕೆಳಸ್ತರದಲ್ಲಿರತಕ್ಕಂಥವರು ಈ ದೇಶದಲ್ಲಿ ಚುನಾವಣೆಗಳಲ್ಲಿ ಭಾಗವಹಿಸಿ ಹೆಚ್ಚು ಮತದಾನ ಮಾಡಿ ಏನೇನು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ, ಅವರ aspirations ಏನು ಎನ್ನುವುದರ ಬಗ್ಗೆ ಅವರ ಗಮನ ಸೆಳೆದೆ. ಅವನು ಚುನಾವಣೆ ದಿನ ಕೂಲಿನಾಲಿ ಬಿಟ್ಟು ಓಟು ಹಾಕುತ್ತಾನೆ. ಅವನಿಗೆ ಯಾವುದೋ ಒಂದು ಪಕ್ಷದ ಬಗ್ಗೆ, ಒಂದು ನಾಯಕತ್ವದ ಬಗ್ಗೆ ನಂಬಿಕೆ, ನನ್ನ ಜೀವನ ಸುಧಾರಿಸಬಹುದು, ನನ್ನ ಮಕ್ಕಳ ಜೀವನ ಸುಧಾರಿಸಬಹುದು ಎಂದು ಅವನು ಹೋಗಿ ಮತದಾನ ಮಾಡುತ್ತಾನೆ. ಸರ್ಕಾರ ಅಧಿಕಾರಕ್ಕೆ ಬಂದಂತಹ ಸಮಯದಲ್ಲಿ ಅವನಿಗೆ ಧ್ವನಿ ಇರುವುದಿಲ್ಲ. ಅವನು ಅವನ ಶಕ್ತಿಯನ್ನು ಧಾರೆ ಎರೆದು ಕೊಟ್ಟುಬಿಡುತ್ತಾನೆ, ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿರುವಂಥಾದ್ದು, ಅಂತಹ ಕಾರ್ಯಕ್ರಮದಲ್ಲಿ ನಾನು ಮಾನ್ಯ ವಿರೇಂದ್ರ ಪಾಟೀಲ್‌ರವರಿಗೆ ಒಂದು ಸಮುದಾಯ ಭವನವನ್ನು ಕಟ್ಟುವುದಕ್ಕೆ 25 ಲಕ್ಷ ರೂಪಾಯಿ ಬೇಕಾಗಿದೆ ಎಂದು ಹೇಳಿದೆನು. ಇವರು ಆರ್ಥಿಕವಾಗಿ ಅಶಕ್ತರು, ಇವರಿಗೆ ಹತ್ತು ಸಾವಿರ ರೂಪಾಯಿ ಕೂಡ ಸಂಗ್ರಹ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ನೀವು ಇವರಿಗೆ 25 ಲಕ್ಷ ರೂಪಾಯಿಯನ್ನು ಕೊಡಬೇಕೆಂದು ಹೇಳಿದೆನು.

ಅವರು ಬಹಳ ಚೆನ್ನಾಗಿ ಹೇಳಿದರು. ನಾನು 25 ಲಕ್ಷ ರೂಪಾಯಿಗಳನ್ನು ಕೊಡುತ್ತೇನೋ, ಇಲ್ಲವೋ, ಎಂದು ಹೇಳುತ್ತಿದ್ದಾರೆ. ನಮ್ಮ ಯುವಕ ಮಿತ್ರರು ಶ್ರೀನಿವಾಸ ಪ್ರಸಾದ್‌ರು ಏಕೋ ಸಂಶಯದಿಂದ ಹೇಳುತ್ತಿದ್ದಾರೆ. ನಾನು ಒಬ್ಬ ಮುಖ್ಯಮಂತ್ರಿಯಾಗಿ ನನಗೆ ಅದು ಅರ್ಥವಾಗಿದೆ. ಅಶಕ್ತರಿಗೆ ಯಾರಿಗೆ ಸ್ಪಂದಿಸಬೇಕು, ಯಾರಿಗೆ ಸಹಾಯ ಮಾಡಬೇಕೆಂದು ಈ ವೇದಿಕೆಯನ್ನು ಇಳಿಯುವಷ್ಟರಲ್ಲಿ 25 ಲಕ್ಷ ರೂಪಾಯಿಗಳನ್ನು ಇವರಿಗೆ ಕೊಟ್ಟಿದ್ದೇನೆ, ಇದು ಸರ್ಕಾರದ ಆಜ್ಞೆ ಎಂದು ಹೇಳಿದರು. ಅವರ ಜೊತೆಯಲ್ಲಿ ಸಂಜೆ ಮತ್ತೆ ಇನ್ನೊಂದು ಕಾರ್ಯಕ್ರಮಕ್ಕೆ ಹೋದೆ. ಒಂದು ಪ್ರತಿಷ್ಠಿತವಾದ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮಕ್ಕೆ ಹೋದೆ. ನಾನು ಮಾನ್ಯ ವಿರೇಂದ್ರ ಪಾಟೀಲ್‌ರವರ ಜೊತೆಯಲ್ಲಿ ಹೋಗಿ ಕುಳಿತುಕೊಂಡೆ. ಅಲ್ಲಿಗೆ ಹೋದ ತಕ್ಷಣ ಆ ಸಂಸ್ಥೆಯವರು ಅವರಿಗೆ ಒಂದು ಮನವಿಯನ್ನು ಕೊಟ್ಟರು. ನಾವು ಈ ಸ್ಟೇಡಿಯಂ ಅನ್ನು ಕಟ್ಟುತ್ತಿದ್ದೇವೆ. ನಮಗೆ ಒಂದು ಅತ್ಯುತ್ತಮವಾದ ಆಟದ ಮೈದಾನ ಬೇಕಾಗಿದೆ. ನಮಗೆ 20 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದರು. ಮಾನ್ಯ ವಿರೇಂದ್ರ ಪಾಟೀಲ್‌ರವರು ಮಾತನಾಡುತ್ತಾ ಹೇಳಿದರು. ನನ್ನ ಸರ್ಕಾರ ಈಗ ತಾನೇ ಅಧಿಕಾರಕ್ಕೆ ಬಂದಿದೆ. ನನ್ನ ಸರ್ಕಾರದಲ್ಲಿ ಒಬ್ಬ ಹಣಕಾಸಿನ ಸಚಿವರು ಇರುತ್ತಾರೆ. ಇವತ್ತು ಹಣಕಾಸಿನ ಸ್ಥಿತಿಗತಿಗಳು ಹೇಗಿದೆಯೆಂಬುದು ಗೊತ್ತಿಲ್ಲ. ಹಾಗಾಗಿ ನಾನು ನಿಮಗೆ ಏನು ಭರವಸೆಯನ್ನು ಕೊಡುವುದಿಲ್ಲ. ನೀವು ಏನು ಮನವಿಯನ್ನು ಕೊಟ್ಟಿದ್ದೀರಿ. ಅದನ್ನು ಹಣಕಾಸಿನ ಸಚಿವರಿಗೆ ಕಳುಹಿಸಿ ಕೊಡುತ್ತೇನೆಂಬ ಮಾತನ್ನು ಹೇಳಿದರು. ನಾನು ಅವರ ಜೊತೆಯಲ್ಲಿ ಬರುವಾಗ, ಅವರನ್ನು ನಾನು ಕೇಳಿದೆ. ಸಾರ್, 25 ಲಕ್ಷ ರೂಪಾಯಿಗಳು ನಾನು ವೇದಿಕೆ ಇಳಿಯುವಷ್ಟರಲ್ಲಿ ಇದು ಆಜ್ಞೆ ಆಗುತ್ತದೆಂದು ನೀವು ಬೆಳಿಗ್ಗೆ ಹೀಗೆ ಹೇಳಿದ್ದೀರಿ. ಆದರೆ ಇಲ್ಲಿ ನೀವು ಏನೂ ಕೊಡುವುದಿಲ್ಲವೆನ್ನುವ ರೀತಿಯಲ್ಲಿ ಹೇಳಿದ್ದೀರಿ. ಅದಕ್ಕೆ ನೀವು ಬಹಳ ಯೋಚನೆ ಮಾಡಿ ಕೇಳುತ್ತಿದ್ದೀರೆಂದು ಹೇಳಿದರು. ನಾನು ಈ ಸಂಸ್ಥೆಗೆ ಏನು ಬಂದಿದ್ದೇನೆ. ಇದು ಕೋಟ್ಯಾಂತರ ರೂಪಾಯಿಗಳಿರಬಹುದು, ನನಗೆ ಒಂದು ಹಾರ ಹಾಕಿ, ನಿಂಬೆಹಣ್ಣನ್ನು ಕೊಟ್ಟು, ಒಂದು ಮನವಿಯನ್ನು ಕೊಟ್ಟಿದ್ದಾರೆಂದು ಹೇಳಿದರೆ, ಇವರಿಗೆ ಯಾವ ಲೆಕ್ಕ? ಸರ್ಕಾರ ಇದೆ, ಏನೋ ಕೊಡಲಿ ಬಿಡಿ ಎಂದು ಹೇಳುತ್ತಾರೆ. ಆದರೆ ಕೊಡುವ ವಿಚಾರದಲ್ಲಿ ಯೋಚನೆ ಮಾಡುವಂಥದ್ದು ನಮಗೆ ಇರಬೇಕಲ್ಲಾ, ಎಂದು ಹೇಳಿದರು. ಇದು ಬುದ್ಧಿವಂತಿಕೆಯಲ್ಲಿ

ಇರುವಂಥದ್ದು. ನಿಮ್ಮನ್ನು ಯಾರು ಹೊಗಳುತ್ತಾರೆ, ಯಾರು ನಿಮಗೆ ಹಾರ, ತುರಾಯಿಗಳನ್ನು ಹಾಕಿ ಆಕಾಶದೆತ್ತರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಅವರಿಗೆ ಅಲ್ಲ, ಇವತ್ತು ಹಣವನ್ನು ಕೊಡುವುದಕ್ಕೆ ಟ್ರೆಜರಿ ಇರುವಂಥದ್ದು. ಯಾರು ಅಶಕ್ತರು ಇರುತ್ತಾರೆ ಅವರಿಗೆ ಕೊಡುವ ಬಗ್ಗೆ ಯೋಚನೆ ಮಾಡಿ. ಇದನ್ನು ಬಹುಶಃ ನಾನು ಮಾನ್ಯ ವಿರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿ ಯಾಗಿದ್ದಾಗ ನೋಡಿರುವಂಥದ್ದು. ಈ ರೀತಿ ಯೋಚನೆ ಮಾಡುವಂಥ ಅಂತರಿಕವಾದ ಒಳನೋಟ ಮಾನ್ಯ ಮುಖ್ಯಮಂತಿಯವರಿಗೆ, ಆಡಳಿತ ನಡೆಸುವಂಥವರಿಗೆ ಇರಬೇಕು. ಎಲ್ಲೆಲ್ಲಿ ಹೋಗಿ ಹೇಳುತ್ತಾರೋ ಅಲ್ಲೆಲ್ಲಾ 3 ಕೋಟಿ, 5 ಕೋಟಿ, 8 ಕೋಟಿ, 10 ಕೋಟಿ, ಕೊಡುತ್ತೇನೆಂದು ಹೇಳು ವಂಥದ್ದು ಸರಿಯಲ್ಲವೆನ್ನುವ ಮಾತನ್ನು ಹೇಳುತ್ತೇನೆ. ನನಗೆ ಸಮಾಧಾನ ವಾಗಿರುವಂಥದ್ದನ್ನು ಹೇಳಿದೆ, ಆಶಾದಾಯಕವಾಗಿಯೂ ಇದೆಯೆಂದು ಹೇಳಿದೆ. ನನಗೆ education ಬಗ್ಗೆ ತುಂಬಾ ಆಸಕ್ತಿ ಇದೆ. ನಾನು Parliament ನಲ್ಲಿ ಹೆಚ್ಚಿಗೆ ಶಿಕ್ಷಣದ ಬಗ್ಗೆಯೇ ಮಾತನಾಡುತ್ತಿದ್ದೆ, ಏಕೆಂದರೆ ಇವತ್ತು ದೇಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಏನು ಅಸಮಾನತೆ ಇದೆ. ಅದು ಇವತ್ತು ಕೂಡ ಇಲ್ಲಿ ಇರುವಂಥ ಮೂಢನಂಬಿಕೆಗಳು, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಇದಕ್ಕೆ ಕಾರಣ ನಮಗೆ ಜ್ಞಾನ ಇಲ್ಲದೇ ಇರುವುದು. Education is nothing but knowledge ಎಂದು ಇನ್ನೇನು ಇಲ್ಲ. ಈ ದೇಶಕ್ಕೆ ಡಾ: ಅಂಬೇಡ್ಕರ್ ರವರು ಸಂವಿಧಾನವನ್ನು ಬರೆದು ಕೊಟ್ಟಾಗ directive principles ನಲ್ಲಿ Compulsory and free education ಹೇಳಿದ್ದರು. ಕಡ್ಡಾಯ ಮತ್ತು ಉಚಿತ ಶಿಕ್ಷಣ ಕೊಡಬೇಕೆಂದು ಹೇಳಿದರು. ನಾವು 1950ನೇ ಇಸವಿಯಲ್ಲಿ directive principle ಅಳವಡಿಸಿಕೊಂಡು ನಾವು ಏನಾದರೂ ಅದಕ್ಕೆ ಒಂದು ಕಾಯಿದೆಯನ್ನು ಮಾಡಿ ತಂದು ಬಿಟ್ಟಿದ್ದರೆ, ಈ ದೇಶದ ಪರಿಸ್ಥಿತಿಯೇ ಬದಲಾವಣೆಯಾಗುತ್ತಿತ್ತು. ನನು ಜ್ಞಾನ, ತಿಳಿವಳಿಕೆ ಕೊರತೆ ಇದೆಯೆಂದು ಹೇಳಿದೆ. Education is nothing but knowledge. ಮಾಡಲಿಲ್ಲ, ಆನಂತರ ಈಗ ನಾವು ಸರ್ವ ಶಿಕ್ಷಣ ಅಭಿಯಾನದಲ್ಲಿ ತರುತ್ತಿರುವಂಥದ್ದು, ನೀವು 10 ನೇ ತರಗತಿಯವರೆಗೂ ಕಡ್ಡಾಯ ಶಿಕ್ಷಣ ಮಾಡೋಣವೆಂದು ಇವತ್ತು ಮಾಡಿದ್ದೀರಿ. ಇದು ತುಂಬಾ ಒಳ್ಳೆಯ ಕಾರ್ಯಕ್ರಮ, ನೀವು ಶಿಕ್ಷಣದ ಬಗ್ಗೆ ಹೆಚ್ಚು ಹೆಚ್ಚು ಒತ್ತನು ಕೊಡಬೇಕಾಗಿದೆ. ಆದರೆ ಶಿಕ್ಷಣವನ್ನು ಕೊಡುವ ಸಂದರ್ಭದಲ್ಲಿ ಬಿಸಿಯೂಟದ ಬಗ್ಗೆ ನಾನು

ಯೋಚನೆ ಮಾಡುತ್ತಿದ್ದೇನೆ. ನಾನು ಕೂಡ Central Government ನಲ್ಲಿ Food Minister ಆಗಿದ್ದೆ. ನಾನು ಮತ್ತು Human Resources Development Minister ಯಾವ ರೀತಿಯಲ್ಲಿ Mid day meals ಕೊಡಬೇಕೆಂಬ ಬಗ್ಗೆ ಮಾತನಾಡಿಕೊಂಡಿದ್ದೆವು. Mid day meals ಎಂದರೆ ಏನೋ ಒಂದು ತುತ್ತು ಕೊಡೋಣವೆಂದು ಅಲ್ಲ. drop out ಹೇಗೆ ಆಗುತ್ತದೆಂದು ನಮಗೆ ಗೊತ್ತಿದೆ. ಬಡತನದಲ್ಲಿರುವವರಿಗೆ ಗೊತ್ತಿದೆ, ಹಳ್ಳಿಗಾಡಿನಿಂದ ಆಯ್ಕೆಯಾಗಿರುವ ನಮಗೆ ಗೊತ್ತಿದೆ. ಇಂಥ ತಂದೆ ತಾಯಿಯರು ದುಡಿಯುವುದೇ ದೊಡ್ಡದು, ಮಗುವನ್ನು ಶಾಲೆಗೆ ಹೋಗಿ ಎಂದು ಹೇಳುವ ಆ ಬುದ್ಧಿ, ಯೋಚನೆ ಇರುವುದಿಲ್ಲ. ತಾವು ದುಡಿದು, ತಮ್ಮ ಹೊಟ್ಟೆಗೆ ಆ ಮಗುವಿನ ಹೊಟ್ಟೆಗೆ ಕೊಡಬೇಕೆನ್ನುವಂಥದ್ದನ್ನು ನೋಡುತ್ತಾರೆ. ಆ ತಂದೆ ತಾಯಿಗಳು ದುಡಿಯುವುದಕ್ಕೆ ಹೋದರೆ, ಈ ಮಕ್ಕಳು ಸೀಬೆಕಾಯಿಯನ್ನು ಆಡಿಕೊಂಡು ಎಲ್ಲೋ ನಿಂತಿರುತ್ತವೆ. ಅದಕ್ಕೋಸ್ಕರ Mid day meals ಮಾಡಿ, ಮಧ್ಯಾಹ್ನ nutrition food, ಪೌಷ್ಠಿಕ ಆಹಾರವೆಂದು ಏನಾದರೂ ಆಹಾರವನ್ನು ಕೊಟ್ಟರೆ ಆ ಮಕ್ಕಳು ಓಡಿ ಬರುತ್ತವೆ. ಅವರಿಗೆ ಊಟ ಕೊಡುವ ಮೂಲಕ ಶಿಕ್ಷಣದಲ್ಲಿ ಆಸಕ್ತಿಯನ್ನು ಬರಿಸಬೇಕು. ಅದಕ್ಕೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣದಲ್ಲಿ ಆಸಕ್ತಿ ಬರಬೇಕೆಂಬ ರೀತಿಯಲ್ಲಿ ಕೊಡಬೇಕೆಂದು ನಾವು ಆಹಾರವನ್ನು ಕೊಡವಂಥದ್ದು. ಇದಕ್ಕೆ ಹಣವನ್ನು ಎಷ್ಟು ಖರ್ಚು ಮಾಡುತ್ತಿದ್ದೇವೆಂದರೆ ಕೇಂದ್ರ ಸರ್ಕಾರದಿಂದ 2009–10ನೇ ಸಾಲಿನಲ್ಲಿ 234 ಕೋಟಿ ರೂಪಾಯಿಗಳು, ರಾಜ್ಯ ಸರ್ಕಾರ ದಿಂದ 223 ಕೋಟಿ ರೂಪಾಯಿಗಳು, ಒಟ್ಟು 457 ಕೋಟಿ ರೂಫಾಯಿಗನ್ನು ಖರ್ಚು ಮಾಡುತ್ತಿದ್ದೇವೆ. ಇವತ್ತು ಈ 457 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಒಂದು ಕಾರ್ಯಕ್ರಮಕ್ಕೆ ಒಂದು ಪ್ರತ್ಯೇಕವಾದಂಥ ಇಲಾಖೆ ಬೇಕು. ಇದು ತಮಿಳುನಾಡಿನಲ್ಲಿರುವಂಥದ್ದು. ಇದನ್ನು ಶಿಕ್ಷಣ ಇಲಾಖೆಯ ಮೇಸ್ಟ್ರುಗಳಿಗೆ ಕೊಡುವುದಕ್ಕೆ ಹೋಗಬೇಡಿ. ಇದು ಆಗುತ್ತಾ ಇಲ್ಲ, ಇಷ್ಟು ಕೋಟಿ ರೂಪಾಯಿಗಳ ಯೋಜನೆ ಬಹಳ ಯಶಸ್ವಿಯಾಗಿ ನಡೆಯಲು ಮಾನ್ಯ ಬಸವರಾಜ ಬೊಮ್ಮಾಯಿಯವರೆ. ನೀವು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ, ಇದು ಬಹಳ ಮುಖ್ಯವಾದದ್ದು. ಶಿಕ್ಷಣದ ಬಗ್ಗೆ ಆಸಕ್ತಿ ಬಂದು ಸರ್ವ ಶಿಕ್ಷಣ ಅಭಿಯಾನಕ್ಕೆ ಬುನಾದಿ ಇರುವಂಥದ್ದು. ಆದ್ದರಿಂದ ಇದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವಂಥ ರೀತಿಯಲ್ಲಿ ಇದಕ್ಕೆ

Separate Directorate ಬೇಕು. Full fledged Minister ಬೇಕಾಗುತ್ತದೆ, Separate Secretariat ಕೊಡಬೇಕಾಗುತ್ತದೆ. ತಾವು ಇದರ ಬಗ್ಗೆ ಯೋಚನೆ ಮಾಡಿ. ಇದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥದ್ದು. ಇನ್ನು ಕೂಡ ಹೆಚ್ಚೆಚ್ಚು ಹಣವನ್ನು 10ನೇ ತರಗತಿಯವರೆಗೂ Mid day meals ಕೊಡಬೇಕಾದರೆ ಇಲ್ಲಿ ಲಕ್ಷಾಂತರ ಮಕ್ಕಳಿಗೆ ಇದನ್ನು ಕೊಡುವಂಥದ್ದು. ಈ ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಪ್ರತ್ಯೇಕವಾದ ಒಂದು ಇಲಾಖೆಯನ್ನು ನೀವು ಮಾಡುವ ಬಗ್ಗೆ ಗಮನವನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು university ಗಳ ಬಗ್ಗೆ ಹೇಳುವುದಾದರೆ, ಎಷ್ಟು university ಗಳು ಇವೆ. ಬಳ್ಳಾರಿ– ಕೊಪ್ಪಳ ಸೇರಿಸಿ ಒಂದು university, ತುಮಕೂರಿಗೆ ಒಂದು university, ಒಟ್ಟು ಎಷ್ಟು conventional university ಗಳು ಎಷ್ಟು ಇವೆಯೆಂದು ತಿಳಿದುಕೊಂಡಿದ್ದೀರಿ. ಬಳ್ಳಾರಿಯದು ಸೇರಿಸಿಕೊಂಡು ಒಟ್ಟು 9 university ಗಳು ಬಂದಿರುವಂಥದ್ದು. ಅವು ಮೈಸೂರು, ಬೆಂಗಳೂರು, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಗುಲ್ಬರ್ಗಾ, ಧಾರವಾಡ, ತುಮಕೂರು, ಬಳ್ಳಾರಿಯಲ್ಲಿವೆ. ಇದರ ಜೊತೆಗೆ ಇನ್ನು ಏನು Sanskrit University ಬರುತ್ತಿದೆ, ಈಗಾಗಲೇ ಕನ್ನಡಕ್ಕೆ ಹಂಪೆ university ಇರುವಂಥದ್ದು, ಸಂಗೀತಕ್ಕೆ ಒಂದು university.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಚೇರ್ಮನ್‌ರವರೆ, ತಮಗೆ ಗೊತ್ತಿದೆ. UGC recommendation ಪ್ರಕಾರ ಇದು ಮಾನ್ಯ ಪರಮೇಶ್ವರ್ ರವರಿಗೂ ಗೊತ್ತಿದೆ. 60 ರಿಂದ 100 ಕಾಲೇಜುಗಳನ್ನೊಳಗೊಂಡಂತೆ ಒಂದು ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಹೇಳಿದ್ದಾರೆ. ಹಾಗಾಗಿ ನಾನು UGC Chairman ರನ್ನು ಭೇಟಿ ಮಾಡಿದಾಗ, ಅವರು ಕೂಡ ಇದನ್ನು insist ಮಾಡಿದರು. ಇದು UGC ಯಿಂದ ಬಂದಿರುವ recommendation ಆಗಿದೆ. ನಮ್ಮಲ್ಲಿ UGC recommendation ಪ್ರಕಾರ bifurcations ನಡೆಯುತ್ತಿದೆ. ತಮಗೆ ಗೊತ್ತಿರುವ ಹಾಗೆ ಕಳೆದ ವರ್ಷ ದಾವಣಗೆರೆಯಲ್ಲಿ ಮಾಡಿದ್ದೇವೆ, ಈ ವರ್ಷ ಬಳ್ಳಾರಿ–ಕೊಪ್ಪಳ ಸೇರಿಸಿ ಬಳ್ಳಾರಿ ವಿಶ್ವವಿದ್ಯಾಲಯವನ್ನು ಮಾಡಿದ್ದೇವೆ. ಇದೇ ರೀತಿ ಧಾರವಾಡ university ಯನ್ನು bifurcate ಮಾಡಿ ಬೆಳಗಾಂ ಮಾಡಬೇಕೆಂಬ proposal ಕೂಡ ಇದೆ. Bangalore

University ಯನ್ನು ಕೂಡ bifurcate ಮಾಡಿ, trifurcate ಮಾಡುವಂತ ಸನ್ನಿವೇಶವಿದೆ. ಇದನ್ನು insist ಮಾಡಿದ್ದರು. ಬಾಂಬೆ, ಬೆಂಗಳೂರು, ಈ ರೀತಿ ಎಲ್ಲಾ ಎರಡಲ್ಲ, ಮೂರು, ನಾಲ್ಕು university ಗಳನ್ನು ಮಾಡುವಂಥ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದ್ದಾರೆ. ಹೀಗಾಗಿ ಆ recommendationನಲ್ಲಿ ಹೊಸದಾಗಿ ವಿಶ್ವವಿದ್ಯಾಲಯಗಳನ್ನು ಮಾಡುತ್ತಿದ್ದೇವೆ. ಇದು ಬೇರೆ ಉದ್ದೇಶದಿಂದ ಅಲ್ಲ, ಅದರಿಂದ ಹೆಚ್ಚು ಹಣವನ್ನು ಸರ್ಕಾರ ಶಿಕ್ಷಣಕ್ಕೆ ತೊಡಗಿಸುತ್ತಿದೆ. ಇದನ್ನು ತಾವು ಸ್ವಾಗತ ಮಾಡುತ್ತೀರೆಂದು ಭಾವಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಒಂದು university ಯಾವ ಮಟ್ಟದಲ್ಲಿ ನಡೆಯಬೇಕಾಗಿತ್ತೋ, ಆ ಮಟ್ಟಕ್ಕೆ higher education, ವಾತಾವರಣದಲ್ಲಿ ನಡೆಯಬೇಕು.

ಶ್ರೀ ಬಸವರಾಜ ಬೊಮ್ಮಾಯಿ : UGC Recommendation ಒಂದು ಕಡೆ, Central Government Knowledge Commission recommendation ಕೂಡ ಈಗ ಇರುವಂಥ ಜನಸಂಖ್ಯೆ ಮತ್ತು ಈಗ ಇರುವಂಥ ಕಾಲೇಜುಗಳ ಸಂಖ್ಯೆಯನ್ನು ನೋಡಿದಾಗ, ಈಗ ಇರುವಂಥ University ಗಳು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ we should have more Universities for a concentrated effort for higher education ಎನ್ನುವ ಒಂದು recommendation ಅನ್ನು Government of India ಕೊಟ್ಟಿದೆ. ಆ ಹಿನ್ನಲೆಯಲ್ಲಿ ನಮ್ಮ ಸಚಿವರು ಇವತ್ತು ಕ್ರಮಗಳನ್ನು ಜರುಗಿಸುತ್ತಿದ್ದಾರೆ. ಅವರು ಉದಾಹರಣೆಗೆ ಹೇಳಿದಂತೆ ಬೆಂಗಳೂರಿನಲ್ಲಿ trifurcation ಮಾಡಬೇಕೆನ್ನುವ ಬಗ್ಗೆ ತುಮಕೂರಿನಲ್ಲಿದೆ. ಬೆಂಗಳೂರಿನಲ್ಲಿ ಮೂರು University ಯನ್ನು ಮಾಡಬೇಕೆನ್ನು proposal UGC ಯಲ್ಲೂ ಇದೆ, ನಮ್ಮ Knowledge Commission ನಲ್ಲೂ ಇದೆ, Central Government Knowledge Commission ನಲ್ಲೂ ಕೂಡ ಇದೆ. ಈ ರೀತಿ ನಮ್ಮಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿದೆ. ಆ ಹಿನ್ನಲೆಯಲ್ಲಿ ಮಾಡಿರುವಂಥದ್ದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಉದ್ದೇಶ ಏನೇ ಇರಲಿ, ಈಗಿನ ಸ್ಥಿತಿಗತಿಗಳ ಹಿನ್ನಲೆಯಲ್ಲಿ ಹಣಕಾಸಿನ ಮುಗ್ಗಟ್ಟಿನ ಬಗ್ಗೆ ನಾನು

ಮಾತನಾಡುತ್ತಾ, ಈಗ ನಮಗೆ ಸಂಗೀತ University ಯನ್ನು ಕೊಟ್ಟಿದ್ದೀರಿ. ಅದಕ್ಕೆ ಇನ್ನೂ ಭೂಮಿಯೇ ಸಿಕ್ಕಿಲ್ಲ, ಪರದಾಡುತ್ತಿದೆ, open University ಇದೆ. Engineering ಗೆ ಬೇರೆ ಇದೆ, Medical education ಗೆ University ಬೇರೆ ಇದೆ, Agriculture University ಗಳು ಇವೆ. Conventional University ಗಳು ಇವೆ. ಇದರ ಪ್ರಕಾರ ಮಾಡಬೇಕೆಂದರೆ, ನಮಗೆ ಹಣಕಾಸಿನ ಸ್ಥಿತಿಗಳು ಮುಗ್ಗಟ್ಟು ಹೇಗಿದೆ ಎನ್ನುವ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿರುವಂಥದ್ದು. ಈಗ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ಬೇಕು, ಅದನ್ನು ಮಾಡಿ. ನಮ್ಮಲ್ಲಿ ಇವತ್ತಿನವರೆಗೂ ಜಾತಿವಾರು ವಿದ್ಯಾರ್ಥಿ ನಿಲಯಗಳಲ್ಲೆ ಇರುವಂಥದ್ದು. ಇದಕ್ಕೆ ಕಾರಣಗಳು ಇದೆ. ಸಮಾಜ ಕಲ್ಯಾಣ ಇಲಾಖೆಯವರು ಹಾಸ್ಟೆಲ್‌ಗಳನ್ನು ನಡೆಸುತ್ತಿರುವಂಥದ್ದು ಮತ್ತು ತೀರಾ ಬಡವರಿಗೋಸ್ಕರ ಹಿಂದಿನಿಂದ ಬಂದಿರುವಂಥವರು. ಯಾವ ಜನಾಂಗ ದವರಿಗೆ ಅವರು ಸ್ಥಿತಿಗತಿಗಳಲ್ಲಿ ಉತ್ತಮವಾಗಿರುವವರು ಹಿಂದಿನಿಂದಲೂ ಪ್ರತ್ಯೇಕವಾದ ಹಾಸ್ಟೆಲ್‌ಗಳನ್ನು, ವಿದ್ಯಾರ್ಥಿ ನಿಲಯಗಳನ್ನು ನಡೆಸಿಕೊಂಡು ಬರುತ್ತಿರುವಂಥದ್ದು. ಆದರೆ ತಾವು ಹೊಸದಾಗಿ ಯೋಚನೆ ಮಾಡಿದ್ದೀರಿ. ಇದು ಚೆನ್ನಾಗಿದೆಯೆಂದು ಹೇಳುತ್ತೇನೆ, ಮಾದರಿಯಾದಂಥ ವಿದ್ಯಾರ್ಥಿ ನಿಲಯಗಳು ಬೇಕೆನ್ನುವಂಥದ್ದು, ಇದು ತುಂಬಾ ಒಳ್ಳೆಯ ಯೋಚನೆ ಯಾಗಿದೆ. ಎಲ್ಲಾ ವಿದ್ಯಾರ್ಥಿಗಳು, ಎಲ್ಲಾ ಜನಾಂಗದವರು ಈಗ ಪ್ರತ್ಯೇಕವಾಗಿ OBC, SC, ST ಈ ರೀತಿಯಲ್ಲಿ ಇದೆಯಲ್ಲಾ ಇದನ್ನು ನೋಡಿ, ವಿದ್ಯಾರ್ಥಿಗಳು ಕೂಡ ಒಂದು ಒಳ್ಳೆಯ ವಾತಾವರಣದಲ್ಲಿ ಅವರೆಲ್ಲರೂ ಎಂಬ ಭಾವನೆ ಬರಬೇಕೆನ್ನುವ ದೃಷ್ಟಿಯಿಂದ ತಾವು ಈಗ 10 ಜಿಲ್ಲೆಗಳಲ್ಲಿ ಮಾದರಿ ವಿದ್ಯಾರ್ಥಿ ನಿಲಯಗಳನ್ನು ಏನು ಮಾಡುತ್ತಿದ್ದೀರಿ, ಅದನ್ನು ಮಾಡಿ, ಅದಕ್ಕೆ ಹೆಚ್ಚಿನ ಹಣವನ್ನು ಕೊಡಿ.

ಕೇವಲ 10 ಜಿಲ್ಲೆಗಳಿಗಲ್ಲ, ಇನ್ನೂ ಹೆಚ್ಚು ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಕೊಡಿ. ಇದರಲ್ಲಿ ಆಶಾದಾಯಕವಾದ ಕೆಲವು ವಿಚಾರಗಳಿವೆ ಎಂದು ನಾನು ಹೇಳಿದೆ. Tribal Sub Plan ಮತ್ತು Special Component Paln ಗಳ ಹೇಳುವುದಾದರೆ, Tribal Sub Plan ನಲ್ಲಿ ಕೂಡ ಸರಿಯಾಗಿ ಉಪಯೋಗ ಆಗಬೇಕು. Primitive tribes ಗೂ ಕೂಡ ನಾವು ಆದ್ಯತೆ ಮೇಲೆ ಮಾಡಬೇಕಾಗಿತ್ತು. Those who are living from the centuries

in the midst of forests, ಆ primitive tribes ಗೂ ಆದ್ಯತೆ ಕೊಡಬೇಕು. ಕೇಂದ್ರ ಸರ್ಕಾರದಲ್ಲಿ Tribal Sub Plan ಮಾಡಿ ಕೋಟ್ಯಾಂತರ ರೂಪಾಯಿಯನ್ನು ಕೊಡುತ್ತಿದ್ದಾರೆ, ಆದರೆ ಅದು ಅವರಿಗೆ ಹೋಗುತ್ತಿಲ್ಲ ಎನ್ನುವುದಿದೆ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಈ ಸಾರಿ ನೀವು Tribal Sub Plan ಮತ್ತು Special Component Plan ನಲ್ಲಿ ಹಣವನ್ನು ಹೆಚ್ಚು ಮಾಡಿದ್ದೀರಿ. ಸಮಾಜದ ಕೆಳಸ್ತರದಲ್ಲಿರತಕ್ಕಂಥವರಿಗೆ Special Component Plan ನಲ್ಲಿರುವುದನ್ನು ಯಾವ ರೀತಿ ಉಪಯೋಗವಾಗಬೇಕು ಎನ್ನುವುದನ್ನು ಮಾಡಬೇಕು. ಆರ್ಥಿಕವಾಗಿ ಸಬಲೀಕರಣವಾಗುವ ರೀತಿಯಲ್ಲಿ ಮಾಡಬೇಕು. ನಾನು ಕೇಂದ್ರದಲ್ಲಿದ್ದು ಬಂದಿರುವವನು. Globalization ಹಿನ್ನಲೆಯಲ್ಲಿ W.T.O. agreement ಆದಾಗ ನಾನೂ ಕೂಡ ಕೇಂದ್ರದಲ್ಲಿ ಸದಸ್ಯನಾಗಿದ್ದೆ ಮತ್ತು ಆ ಚರ್ಚೆಯಲ್ಲಿ ಭಾಗವಹಿಸಿದ್ದೆನು. ಜಾಗತೀಕರಣದ ಹಿನ್ನಲೆಯಲ್ಲಿ ನಾವು ಬಹಳ ಹತಾಶರಾಗಿದ್ದೇವೆ. ಈ competitive worldನಲ್ಲಿ ನಾವು ಸ್ಪರ್ಧಾತ್ಮಕವಾದಂಥ, ವೈಜ್ಞಾನಿಕವಾದಂಥ ಯುಗದಲ್ಲಿ ನಾವು ಮುಂದುವರೆದಂಥ ಬೇರೆ ಬೇರೆ ರಾಷ್ಟ್ರಗಳ ಜೊತೆಯಲ್ಲಿ ಪೈಪೋಟಿ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ ಬಂದು ಭಯ ಬೀಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. Globalization ವಿಷಯದ ಮೇಲೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಜಾಗತೀಕರಣದ ಹಿನ್ನಲೆಯಲ್ಲಿ ನಾವು ಏಕೆ ಹೆದರುತ್ತಿದ್ದೇವೆ ಎನ್ನುವುದನ್ನು ಹೇಳಿದೆ. I had been to America as Consumer Affairs Minister. ಅಲ್ಲಿ ನನಗೆ ಕರ್ನಾಟಕದ ಒಬ್ಬ ಪ್ರೊಫೆಸರ್‌ರವರು, ಚೈನೀಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಹೋಗಿ ನೀವು ನೋಡಬೇಕು ಎಂದು ಹೇಳಿದರು. ಅಲ್ಲಿ ನೋಡಿ ನನಗೆ ಆಶ್ಚರ್ಯವಾಯಿತು. ಅಲ್ಲಿ ಒಂದು, ಡಾಲರ್‌ಗೆ, ಚೈನಾ ದೇಶದಲ್ಲಿ ಉತ್ಪಾದನೆಯಾಗತಕ್ಕಂಥ ಎಲ್ಲ ರೀತಿಯ ವಸ್ತುಗಳು ಅದು groceries ಇರಬಹುದು, cosmetics ಇರಬಹುದು, ಎಲ್ಲವೂ ಸಿಗುತ್ತಿತ್ತು. It was so cheap. ಅಮೆರಿಕಾ ದೇಶದ ಮಧ್ಯಮ ವರ್ಗದ ಜನರು ಚೈನೀಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಮುಗಿಬೀಳುತ್ತಿರುತ್ತಾರೆ. Globalization

ಹಿನ್ನಲೆಯಲ್ಲಿ ಸ್ಪರ್ಧೆ ಇರುವುದು ಇಷ್ಟೇ, cost of production and quality. ಉತ್ಪಾದನಾ ವೆಚ್ಚ ಕಡಿಮೆ ಇರಬೇಕು, ಗುಣಮಟ್ಟ ಚೆನ್ನಾಗಿರಬೇಕು. ನಮ್ಮಲ್ಲಿ ಇದು ಏಕೆ ಆಗುತ್ತಿಲ್ಲ ಎಂದು ನಾವು ಯೋಚನೆ ಮಾಡಿದಾಗ, ಚೈನಾ ದೇಶದಲ್ಲಿರುವರ ಪ್ರತಿಯೊಬ್ಬನ ಕೈಗೂ ಕೂಡ ಉತ್ಪಾದನೆ ಮಾಡುವ ನಿಟ್ಟಿನಲ್ಲಿ ಕೆಲಸ ಸಿಗುತ್ತದೆ. ಆದರೆ ಇವತ್ತು ನಮ್ಮ ದೇಶದಲ್ಲಿ ಹಾಗೆ ಆಗುತ್ತಿಲ್ಲ. ಉದಾಹರಣೆಗೆ, ಪರಿಶಿಷ್ಟ ಜಾತಿಯನ್ನೇ ತೆಗೆದುಕೊಳ್ಳಿ, 30–35% ಇರುವ ಇವರನ್ನು ಎಂದಾದರೂ ಈ ದೇಶದ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿ ರುವಿರೇನು? ನೀವು ಏಕೆ ಹೆದರುತ್ತೀರಿ? ಇವರು ಇನ್ನೂ ಕೂಲಿ–ನಾಲಿ ಮಾಡಿಯೇ ಬದುಕಬೇಕು. Scheduled caste ನಲ್ಲಿರುವ ಒಂದು ಉಪ ಜನಾಂಗದವರು ಕಸ ಗುಡಿಸಿಕೊಂಡೇ ಇರಬೇಕು. ಅವರು ಈ ದೇಶದ ಉತ್ಪಾದನಾ ಕ್ಷೇತ್ರಕ್ಕೆ ಬರಲು ಆಗುತ್ತಿಲ್ಲ. ಉತ್ಪಾದನಾ ಕ್ಷೇತ್ರದಲ್ಲಿ ಆತನಿಗೆ ಅವಕಾಶಗಳೇ ಇಲ್ಲದೇ ಅವನನ್ನು ಒಂದು ಕಡೆ ಕೂರಿಸಿಬಿಟ್ಟಿರುವುದಾಗಿದೆ. ಹೀಗಿರುವಾಗ ನೀವು ಹೇಗೆ compete ಮಾಡಲು ಆಗುತ್ತದೆ? ಈ ದೇಶದಲ್ಲಿ ಪ್ರತಿಯೊಬ್ಬನನ್ನೂ ಕೂಡ ಉತ್ಪಾದನೆಯಲ್ಲಿ ತೊಡಗಿಸಿದಾಗ ಮಾತ್ರ ಉತ್ಪಾದನೆ ಜಾಸ್ತಿಯಾಗುತ್ತದೆ, ಆಗ ನಾನು ಹೇಳಿದ ಹಾಗೆ cost of production ಕಡಿಮೆಯಾಗುತ್ತದೆ, ಗುಣಮಟ್ಟ ಚೆನ್ನಾಗಿರುತ್ತದೆ. ಚೈನಾ ದೇಶದಲ್ಲಿ ಈ ರೀತಿಯಾಗುತ್ತಿರುವುದನ್ನು ನೋಡಿದಾಗ, ಬಹುಶಃ ಇದರಿಂದಾಗಿಯೇ ನಮ್ಮಲ್ಲಿ ಆಗುತ್ತಿಲ್ಲ ಎಂದು ನನಗೆ ಯೋಚನೆಯಾಯಿತು. ಆರ್ಥಿಕವಾಗಿ ಸಬಲೀಕರಣ ಆಗಬೇಕು. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಕೇಂದ್ರ ಇರಬಹುದು ಅಥವಾ ಬೇರೆಬೇರೆ ರಾಜ್ಯ ಸರ್ಕಾರಗಳು ಆರ್ಥಿಕ ಸಬಲೀಕರಣ ಆಗುವ ರೀತಿಯಲ್ಲಿ, ಇವರನ್ನು ಉತ್ಪಾದನೆಯಲ್ಲಿ ತೊಡಗಿಸಿಕೊಂಡು ನೀವು Special Component Plan ನಲ್ಲಿ ಅಥವಾ ಬೇರೆ ಬೇರೆ ರೀತಿಯಲ್ಲಿ ಅವಕಾಶವನ್ನು ಕೊಡಬೇಕು. ಇದು ಆದಾಗ ಮಾತ್ರ ಒಂದು ಅರ್ಥವಿರುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತೇನೆ. ಕೊನೆಯದಾಗಿ, ಬೊಮ್ಮಾಯಿಯವರು ಹೇಳಿದ ಹಾಗೆ ಇದು ಬಹುಮತ ಇರತಕ್ಕಂಥ ಸರ್ಕಾರ. ಆದರೆ ಒಂದು vision ಇರಬೇಕಲ್ಲವೇ? ಯಾವ ಯಾವ ವರ್ಗಕ್ಕೆ ಏನೇನು ಬೇಕು ಎನ್ನುವುದನ್ನು ಬಜೆಟ್‌ನಲ್ಲಿ ಮಾಡುತ್ತೇವೆ. ಅದು below poverty line ಇರಬಹುದು,

higher income group ಇರಬಹುದು, ಮಧ್ಯಮ ವರ್ಗದವರಿಗೆ ಇರಬಹುದು ಎಲ್ಲರಿಗೂ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಇದರ ಜೊತೆಗೆ, ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ, ಐದು ವರ್ಷಗಳ ಅವಧಿಯಲ್ಲಿ ನಾವು ಇಂಥ ಕಾರ್ಯಕ್ರಮವನ್ನು ಮಾಡಿಯೇ ಮಾಡುತ್ತೇವೆ ಎನ್ನುವ ನಿಲುವು ಏಕೆ ಸರ್ಕಾರಕ್ಕೆ ಬರುತ್ತಿಲ್ಲ? ಉದಾಹರಣೆಗೆ ಹೇಳುವುದಾದರೆ ಕೊಳಗೇರಿಗಳು. ಸೂರ್ಯ–ಚಂದ್ರರಿರುವವರೆಗೂ ಈ ದೇಶದಲ್ಲಿ ಕೊಳಗೇರಿಗಳು ಇರಲೇಬೇಕೇ? ಐದು ವರ್ಷಗಳಲ್ಲಿ ಕೊಳಗೇರಿಗಳು ಇಲ್ಲದೇ ಇರುವ ರೀತಿಯಲ್ಲಿ ಅಲ್ಲಿರುವವನ್ನು ಪೂರ್ಣವಾಗಿ rehabilitation ಮಾಡುತ್ತೇವೆ, ಅವರಿಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಕೊಡುತ್ತೇವೆ ಎನ್ನುವ ರಾಜಕೀಯ ಇಚ್ಛಾಶಕ್ತಿ ಏಕೆ ನಮಗಿಲ್ಲ? ಐದು ವರ್ಷಗಳಲ್ಲಿ ಇದನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿಲ್ಲವೇ? ಆ ರೀತಿಯಾದಂಥ ಒಂದು ಕಾರ್ಯಕ್ರಮವನ್ನೂ ನಾವು ಹಾಕಿಕೊಂಡಿಲ್ಲ. ಕೇರಳದ ರೀತಿಯಲ್ಲಿ literacy programme ಏಕೆ ಮಾಡಬಾರದು? ಐದು ವರ್ಷಗಳಲ್ಲಿ ಕರ್ನಾಟಕವನ್ನು ಸಂಪೂರ್ಣ ಸಾಕ್ಷರತಾ ರಾಜ್ಯವನ್ನಾಗಿ ಮಾಡುತ್ತೇವೆ ಎನ್ನುವ ರಾಜಕೀಯ ಶಕ್ತಿ ಏಕಿರಬಾರದು? ಬಹುಮತವಿರುವಂಥ ಸರ್ಕಾರ, ನಾವು ಐದು ವರ್ಷಗಳ ಕಾಲ ಆಡಳಿತ ನಡೆಸುತ್ತೇವೆ ಎನ್ನುವುದು ನಿಮ್ಮ ಮನಸ್ಸಿನಲ್ಲಿದ್ದರೆ ಈ ರೀತಿಯಾದಂಥ ಒಂದು vision ಅಥವಾ ಕನಸುಗಳನ್ನಿಟ್ಟುಕೊಂಡು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿದರೆ ಖಂಡಿತವಾಗಿ ಆಗುತ್ತದೆ. ಆ ರೀತಿಯ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲು ಇನ್ನು ಮೇಲಾದರೂ ಪ್ರಯತ್ನ ಮಾಡಿ. ಈಗ ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗಿದೆ, ಇನ್ನೂ ಮೂರು ವರ್ಷವಿದೆ. ಮೂರು ವರ್ಷಗಳಲ್ಲಿ ಇಂಥ ಕಾರ್ಯಕ್ರಮವನ್ನು ನಾವು ಮಾಡಿಯೇ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಅದು literacy ಇರಬಹುದು ಅಥವಾ ಸ್ಲಂಗಳನ್ನು ತೆಗೆಯುವುದು ಇರಬಹುದು ಅಥವಾ ಗುಡಿಸಲು ರಹಿತ ಗ್ರಾಮೀಣ ಪ್ರದೇಶಗಳನ್ನು ಮಾಡುವುದು ಇರಬಹುದು. ಒಂದು ನಿರ್ದಿಷ್ಟವಾದಂಥ ರೀತಿಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕು, ಈ ಬಗ್ಗೆ ನೀವು ಯೋಚನೆಯನ್ನು ಮಾಡಬೇಕು ಎಂದು ಹೇಳುತ್ತೇನೆ. ಬಜೆಟ್‌ನಲ್ಲಿ ಎಲ್ಲೋ ಒಂದು ಮಾಡುವುದು, ಒಂದು ಬಿಡುವುದು ಮಾಡುವುದಕ್ಕಿಂತ ಇದನ್ನು ತಾವು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು, ಬಜೆಟ್ ಬಗ್ಗೆ ಸಿದ್ದರಾಮಯ್ಯನವರು ತುಂಬ ಚೆನ್ನಾಗಿ ಮಾತನಾಡಿದ್ದಾರೆ. ಬಜೆಟ್‌ನಲ್ಲಿ Plan and Non Plan ಎರಡೂ ಸೇರಿ 70,063 ಕೋಟಿ ರೂಪಾಯಿಗಳಿದೆ. Planning ಗೆ 45%, Non Planning ಗೆ 55% ಇಟ್ಟಿದ್ದಾರೆ. Non Plan ನಲ್ಲಿ ಸಂಬಳ ಸಾರಿಗೆಗಳು, ಸಾಲದ ಬಡ್ಡಿ ಇವುಗಳನ್ನೆಲ್ಲ ಕಟ್ಟುವುದಕ್ಕೆ ಹೋಗುತ್ತದೆ. ಯೋಜನಾ ವೆಚ್ಚಕ್ಕೆ 31,000 ಕೋಟಿ ರೂಪಾಯಿ, ಯೋಜನೇತರ ವೆಚ್ಚಕ್ಕೆ 39,063 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಅರ್ಥಶಾಸ್ತ್ರದ ಹಿನ್ನಲೆಯಲ್ಲಿ ನಾವು ಯೋಚನೆ ಮಾಡಿದಾಗ, ಯೋಜನೆಗೆ ಹೆಚ್ಚು ಹಣ ಕೊಟ್ಟು, ಯೋಜನೇತರಕ್ಕೆ ಕಡಿಮೆ ಕೊಡುವುದು ಇದ್ದರೆ ಅದು ಅತ್ಯುತ್ತಮವಾದ ವ್ಯವಸ್ಥೆಯಾಗುತ್ತದೆ. ಆದರೆ ಅದು ಸಾಧ್ಯವಾಗುತ್ತಿಲ್ಲ. ಬೇರೆಬೇರೆ ರಾಜ್ಯಗಳಲ್ಲೂ ಅದು ಆಗುತ್ತಿಲ್ಲ. ಕಳೆದ ಸಾರಿಯೂ ನಾನು ಆಂಧ್ರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೇಳಿದಾಗ, don't compare Andhra Pradesh with Karnataka ಎಂದು ಹೇಳಿದರು. ಆಂಧ್ರ ಪ್ರದೇಶದಲ್ಲಿ ಶೇ. 40% ರಷ್ಟು ಅಂದರೆ ಸುಮಾರು 22,000 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಟ್ಟಿದ್ದಾರೆ. ಆದರೆ ನಾವು ಇಲ್ಲಿ ನೀರಾವರಿಗೆ ಶೇ.14 ರಷ್ಟು ಮಾತ್ರ ಅಂದರೆ 4,428 ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ಸಿದ್ದರಾಮಯ್ಯನವರು ಮಾತನಾಡುತ್ತಾ, ಕಾವೇರಿ, ಕೃಷ್ಣ ನದಿ ಪಾತ್ರದ ಯೋಜನೆಗಳಿಗೆ ಸುಮಾರು 50,000 ಕೋಟಿ ರೂಪಾಯಿ ನಮಗೆ ಬೇಕಾಗುತ್ತದೆ ಎಂದು ಹೇಳಿದರು. ಇನ್ನು ಹೂಳು ಎತ್ತುವುದು ಬೇರೆಯದೆಲ್ಲವನ್ನು ತೆಗೆದುಕೊಂಡರೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು ಹೆಚ್ಚಿನ ಆದ್ಯತೆಯನ್ನು ನೀವು ನೀರಾವರಿಗೆ ಕೊಬೇಕಾಗಿತ್ತು. ಈಗ ಕೊಟ್ಟಿರುವುದು ಸಾಲಲಿಲ್ಲ. ಏಕೆಂದರೆ, ಈಗಾಗಲೇ ಆಹಾರ ಉತ್ಪಾದನೆ ಕಡಿಮೆಯಾಗಿದೆ. 118 ಮಿಲಿಯನ್ ಟನ್ ಆಹಾರ ಧಾನ್ಯ ಉತ್ಪಾದನೆಯಾಗುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದರೂ, 106 ಮಿಲಿಯನ್ ಟನ್ ಬಂದಿದೆ. ಒಂದು ಕಡೆ ನಾವು ಹಸಿರು ಕ್ರಾಂತಿ ಬಗ್ಗೆ ಮಾತನಾಡುತ್ತೇವೆ, ಇನ್ನೊಂದು ಕಡೆ ನೀರಾವರಿ ಯೋಜನೆಗಳಿಗೆ ನಿರೀಕ್ಷೆ ಮಾಡಿದಷ್ಟು ಹಣವನ್ನು ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವುದನ್ನು ಹೇಳಿದ್ದಾರೆ. ನೀರಾವರಿಗೆ ಹೆಚ್ಚಿಗೆ ಹಣ ಕೊಡಬೇಕಾಗಿತ್ತು.

ಇನ್ನು, ಕೈಗಾರಿಕೆಗಳ ವಿಷಯಕ್ಕೆ ಬಂದರೂ ಸಹ, ಕೈಗಾರಿಕೆಗಳಿಗೆ ನಾವು ಪ್ರೋತ್ಸಾಹ ಕೊಡಬೇಕು, ನಿಜ. ಬೇಡ ಎಂದು ನಾವು ಹೇಳಲಿಲ್ಲ. ಆದರೆ ಫಲವತ್ತಾದ ಭೂಮಿಯನ್ನು ರೈತರಿಂದ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. Special Economic Zone ಮಾಡುವಾಗಲೂ ನೀವು ಬಂಜರು ಭೂಮಿಯನ್ನು ಕೊಡಬೇಕು ಅಥವಾ ನಿರುಪಯೋಗವಾಗಿರುವಂಥ ಜಮೀನನ್ನು ಕೊಡಬೇಕು ಅಥವಾ ರೈತರಿಗೆ ಬೇರೆ ಕಡೆ ಜಮೀನನ್ನು ಕೊಟ್ಟು ಅವರನ್ನು ಒಲಿಸಿ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಯವರ ಕೈಗಾರಿಕಾ ನೀತಿ ಅಷ್ಟು ಚೆನ್ನಾಗಿ ಕಾಣಲಿಲ್ಲ. ಉದ್ಯಮಿಗಳಿಗೆ ಯಾವುದೇ ರೀತಿಯಾದ ಷರತ್ತು ಹಾಕಬಾರದು ಎನ್ನುವುದೆಲ್ಲ ಸರಿಯಿಲ್ಲ. ಅವರಿಗೆ ನಾವು ಭೂಮಿ ಕೊಡುತ್ತೇವೆ, ನೀರು ಕೊಡುತ್ತೇವೆ, ವಿದ್ಯುತ್ ಕೊಡುತ್ತೇವೆ, ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆ. ಸರೋಜಿನಿ ಮಹಿಷಿ ವರದಿಯ ಮೇಲೆ ನಾನು ಕೂಡ ಪ್ರಸ್ತಾಪ ಮಾಡಿ ಲೋಕಸಭೆಯಲ್ಲಿ ಭಾಷಣ ಮಾಡಿದ್ದೆ. ಇಲ್ಲೂ ಕೂಡ, ಉದ್ಯಮಿಗಳು ಈ ನೆಲದಿಂದ ಪಡೆಯತಕ್ಕ ಪ್ರಯೋಜನಗಳು, ಸೌಲಭ್ಯಕ್ಕೆ ಪ್ರತಿಯಾಗಿ ನಮಗೆ ನೀವು ಇಲ್ಲಿನವರಿಗೆ ಹೆಚ್ಚಿನ ರೀತಿಯಾದಂಥ ಅವಕಾಶ ಗಳನ್ನು ಕೊಡಬೇಕು, ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸತಕ್ಕಂಥ ನಿಟ್ಟಿನಲ್ಲಿ ಹೆಚ್ಚಿನ ಕೆಲಸಗಳನ್ನು ಕೊಡಬೇಕು ಎನ್ನುವುದನ್ನು ಕೂಡ ಹೇಳಿದೆ. ಮುಖ್ಯಮಂತ್ರಿಯವರು ಆ ರೀತಿ ಹೇಳಬಾರದಿತ್ತು. ನಾವು ಎಲ್ಲೆಲ್ಲಿ ಕೈಗಾರಿಕೆಗೆ ಪ್ರೋತ್ಸಾಹ ಕೊಟ್ಟು, ಉತ್ತೇಜನ ಕೊಟ್ಟು ಕೊಡುತ್ತೇವೋ ಅಲ್ಲಿ ಹೆಚ್ಚಿನ ರೀತಿಯಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಅವರು ಕೊಡಬೇಕು. ಹಸಿರು ಕ್ರಾಂತಿ ಬಗ್ಗೆ ಮಾತನಾಡಿದರೆ ಆಗುವುದಿಲ್ಲ. ನೀರಾವರಿ, ವಿದ್ಯುತ್, ಕೃಷಿಗೆ ಹೆಚ್ಚು ಹೆಚ್ಚು ಒತ್ತನ್ನು ಈ ಬಜೆಟ್‌ನಲ್ಲಿ ಕೊಡಬೇಕಾಗಿತ್ತು. ಆದರೆ, ತುಂಬಾ ಕಡಿಮೆ ಒತ್ತು ಇರುವುದನ್ನು ನಾವು ಇದರಲ್ಲಿ ನೋಡುತ್ತಿದ್ದೇವೆ. ಇನ್ನು, ತೆರಿಗೆ ಬಗ್ಗೆ ಸಿದ್ದರಾಮಯ್ಯನವರು ಹೇಳಿದ್ದಾರೆ. Vat raise ಮಾಡಬೇಕಾಗಿತ್ತು, 1% ಹೆಚ್ಚು ಮಾಡಿದ್ದೀರಿ. ಆದರೆ, ಈ ಸಾರಿ ಹೆಚ್ಚಿಸುವುದು ಬೇಕಾಗಿರಲಿಲ್ಲವೆಂದು ಕಾಣಿಸುತ್ತದೆ. ಏಕೆಂದರೆ, ವಿಶ್ವ ಆರ್ಥಿಕ ಹಿಂಜರಿತ ದಿಂದ ಶ್ರೀಸಾಮಾನ್ಯ ಬಹಳ ಕೆಳಮಟ್ಟಕ್ಕೆ ಹೋಗಿದ್ದಾನೆ, ಬೆಲೆಗಳು ತುಬಾ ಏರಿವೆ, ಅಂತರಾಷ್ಟ್ರೀಯ ಮಟ್ಟದಲ್ಲಿ Petrol, diesel ಬೆಲೆ ಜಾಸ್ತಿಯಾಗಿದ್ದ ರಿಂದ ಕೇಂದ್ರ ಸರ್ಕಾರದವರು ಸಹ ಬೆಲೆ ಏರಿಸಿದಂಥ ಸಂದರ್ಭದಲ್ಲಿ ಇವತ್ತು ಪದಾರ್ಥಗಳ ಬೆಲೆ ವಿಪರೀತ ಏರತಕ್ಕಂಥ ಸಮಯದಲ್ಲಿ ಇಲ್ಲಿ

VAT ಅನ್ನು 1% tax ಜಾಸ್ತಿ ಮಾಡಿದ್ದೀರ. ಅದರ ಪರಿಣಾಮ ನೇರವಾಗಿ ಶ್ರೀಸಾಮಾನ್ಯ ಮೇಲೆ ಪರಿಣಾಮ ಬೀರುತ್ತದೆ. ಅದು ಆಗಬಾರದು. ಈ ಸಲ VAT ಮೇಲೆ tax ಹಾಕುವುದು ಬೇಕಾಗಿರಲಿಲ್ಲ. But, additional revenue ಮಾಡಬೇಕೆಂದು ನೀವು ಅದರ ಮೇಲೆ tax ಹಾಕಿದ್ದೀರಿ. ಏಕೆಂದರೆ, stamp, ನೋಂದಣಿ ಇದೆಲ್ಲ ಆಗುತ್ತಿಲ್ಲ, real estate business ಬಿದ್ದುಹೋಗಿದೆ, Chief Minister ರವರು Commercial tax ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸಿದ ಹಾಗೆ ಕಾಣುವುದಿಲ್ಲ. ಎಷ್ಟು ತೆರಿಗೆ ಬರುತ್ತಿದೆ, ಎಷ್ಟು ಸಂಗ್ರಹ ಆಗಬೇಕಾಗಿತ್ತು ಎನ್ನುವುದನ್ನು ಬಜೆಟ್‌ನಲ್ಲಿ ಕೊಟ್ಟಿಲ್ಲ. ಮೋಟಾರು ವಾಹನಗಳ ಮೇಲೆ ಹೆಚ್ಚಿಗೆ ತೆರಿಗೆ ಹಾಕಿದ್ದೀರಿ. ನೀವ ಏನಿದ್ದರೂ ಕೂಡ ಅಬಕಾರಿ ಬಗ್ಗೆ ಯೋಚನೆ ಮಾಡಬೇಕು. ಅದು ಎಂತಹ ಅಪಾಯಕಾರಿ ಎಂದರೆ, ನಿಮಗೆ ಅಬಕಾರಿಯಿಂದ ಹಣ ಬರಬಹುದು. ಆದರೆ, ನೀವು ಸಾರಾಯಿ ನಿಲ್ಲಿಸಿದ್ದೇಕೆ? ಹಳ್ಳಿಗಳಲ್ಲಿ ನೆಮ್ಮದಿಯಿಲ್ಲ. ಹೆಂಗಸರು, ಮಕ್ಕಳ ಬದುಕಲಿಕ್ಕಾಗುತ್ತಿಲ್ಲ. ಅವರು ನಮ್ಮ ಹತ್ತಿರ ಬಂದು ಮನವಿ ಕೊಡುತ್ತಾರೆ.

(1- 00 PM)

ಅವರ ಕಣ್ಣೀರು ಒರೆಸಬೇಕಾಗಿದೆ. ಸಾರಾಯಿ ನಿಷೇಧ ಮಾಡಿದ್ದರಿಂದ ಏನಾಗಿದೆ ಎಂಬುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಮನೆಮನೆಗಳಲ್ಲಿ ಇವತ್ತು ಕಡಿಮೆ ದರದಲ್ಲಿ ಅಂದರೆ 30–40 ರೂಪಾಯಿಗಳನ್ನು ಕೊಟ್ಟು ಬ್ರಾಂದಿ, ವಿಸ್ಕಿ ಕುಡಿಯುತ್ತಿದ್ದಾರೆ. ಹಳ್ಳಿಗಳಲ್ಲಿ ಯಾವ ರೀತಿ ಹಾವಳಿಯಾಗಿದೆ ಎನ್ನುವುದನ್ನು ನೋಡಬಹುದು. ಕುಡಿಯುವುದು ಜಾಸ್ತಿಯಾಗಿದೆ, ಅದರಿಂದ ಆದಾಯ ಹೆಚ್ಚು ಬರುತ್ತದೆಂದು ಹೇಳಬೇಕೇ ಹೊರತು, ಇವತ್ತು ಹಳ್ಳಿಗಾಡಿನಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಸಂಜೆಯಾದ ಮೇಲೆ ನಾವು ನೀವು ಅಲ್ಲಿ ಹೋಗುವುದಕ್ಕೆ ಆಗುತ್ತದೆಯೇ? ನೆಮ್ಮದಿಯಾದಂಥ ಬದುಕು ಇದೆಯೇನು? ಯಾವುದೇ ಕುಟುಂಬದಲ್ಲಿ ಇವತ್ತು ನೆಮ್ಮದಿಯಿಂದ ಇದ್ದಾರೆಯೇ? ಇಲ್ಲ. ಅದಕ್ಕೆ ಕಟ್ಟುನಿಟ್ಟಾದ ರೀತಿಯಲ್ಲಿ ಅಬಕಾರಿ ಇಲಾಖಾ ವತಿಯಿಂದ ಯಾವ ರೀತಿಯಾಗಿ ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಈ ಅಬಕಾರಿಯಲ್ಲಿ ಇದು ಮಾರಾಟ ಬಹುಶಃ ಆಗಬೇಕಾಗಿತ್ತು, ಇವತ್ತು ತುಂಬಾ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಿರಿ, ಆದರೆ, ನಿಮಗೇನು ಅಂದರೆ ಅಬಕಾರಿ ಇಲಾಖೆಯಿಂದ ಜಾಸ್ತಿಯಾಗಿದೆ ಎನ್ನುವುದು ಒಂದು ಇದೆ. ಬಹುಶಃ ಇದರ ಕಡೆಗೆ

ಹೆಚ್ಚು ಗಮನ ಕೊಡಬೇಕು. ಇನ್ನು, ನಗರಾಭಿವೃದ್ಧಿಗೆ ಹಣ ಇಟ್ಟಿದ್ದೀರಿ. ಮಾನ್ಯ ಅಶೋಕ್‌ರವರು ಮಾತನಾಡುತ್ತಾ, ಬೆಂಗಳೂರಿನಲ್ಲಿ ಮನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೀರಿ, ಏಕೆ ಇಲ್ಲಿಗೆ ಹೆಚ್ಚಿಗೆ ಕೊಡಬಾರದು? ಎಂದು ಹೇಳಿದರು. ಕೊಡಿ. ಆದರೆ, ಇಷ್ಟು ಹಣ ಕೊಟ್ಟಿರುವಂಥದ್ದು ಸರಿಯಲ್ಲ. ನಗರಾಭಿವೃದ್ಧಿಗೆ 32% ಅಂದರೆ 4748 ಕೋಟಿ ರೂಪಾಯಿಗಳು, ಗ್ರಾಮೀಣ ಪ್ರದೇಶಕ್ಕೆ 1563 ಕೋಟಿ ರೂಪಾಯಿಗಳು ಅಂದರೆ ಗ್ರಾಮೀಣ ಪ್ರದೇಶಕ್ಕೆ 4.86% ಕೊಟ್ಟಿದ್ದೀರಿ. ಈ ರೀತಿಯ ತಾರತಮ್ಯವನ್ನು ನೀವು ಬಿಡಬೇಕು. ನೀವು ವಸತಿ ಬಗ್ಗೆಯೂ ಕೂಡ ಗಮನ ಕೊಡಬೇಕಾಗಿದೆ. ಆಶ್ರಯ ಯೋಜನೆಯಲ್ಲಿ ನೀವು ಯಾವುದೇ ಮನೆ ಅಥವಾ ಸೈಟುಗಳನ್ನು ಬಡವರಿಗೆ ಕೊಟ್ಟಿಲ್ಲ. ಇದರ ಬಗ್ಗೆ ಕೂಡ ನೀವು ಗಮನಹರಿಸಬೇಕಾಗಿತ್ತು. ವಸತಿಗೆ ಬಜೆಟ್‌ನಲ್ಲಿ ಕೇವಲ 2.83% provision ಮಾಡಿದ್ದೀರಿ. ಇನ್ನೂ ಕೂಡ ಹೆಚ್ಚಿಗೆ ಕೊಡಬೇಕಾಗಿತ್ತು. ಜನಸ್ಪಂದನಾ ಕಾರ್ಯಕ್ರಮದಲ್ಲಿ, ಸಂಧ್ಯಾ ಸುರಕ್ಷಾ ಅಥವಾ ಬೇರೆ ಬೇರೆ ರೀತಿಯ ಯೋಜನೆಗಳಲ್ಲಿ ಜನರು ನಿವೇಶನಗಳನ್ನು ಕೇಳುತ್ತಿದ್ದಾರೆ. ಇದು ಜನರ ದೊಡ್ಡ ಬೇಡಿಕೆಯಾಗಿದೆ. ರೈತರಿಗೆ ಬೆಳೆಗೆ ಸಂಬಂಧಿಸಿದಂತೆ 3 ಕೋಟಿ ರೂಪಾಯಿಗಳನ್ನು ಕೊಟ್ಟು ನಾಗರಹೊಳೆಯಲ್ಲೋ ನೀವು solar system ಅಳವಡಿಸುವುದಲ್ಲ. ಎಲ್ಲಾ ಕಡೆ ಕೂಡ ಬಹಳ ಸಮಸ್ಯೆ ಇದೆ. ರೈತರು ಬೆಳೆದಂಥ ಬೆಳೆ ಅವರ ಕೈಗೆ ಸಿಗುತ್ತಿಲ್ಲ. ಆನೆಗಳ, ಹಂದಿಗಳ ಕಾಟ ತುಂಬಾ ಆಗುತ್ತಿದೆ. ಇಂಥ ಕಡೆ ನೀವು trench ಅಥವಾ ಅರಣ್ಯ ಸಿಬ್ಬಂದಿಯನ್ನು ಜಾಸ್ತಿ ಮಾಡುವುದು ಅಥವಾ solar system ಅಳವಡಿಸುವಂಥದ್ದು ಮಾಡಬೇಕು. ಈ ಸಂಬಂಧ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡಬೇಕು. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ, ಮಾನ್ಯ ಮುಖ್ಯಮಂತ್ರಿಯವರು ಅಂತ್ಯೋದಯ ಯೋಜನೆಯ ಬಗ್ಗೆ ಹೆಚ್ಚು ಗಮನ ಕೊಟ್ಟು ಸರ್ವೋದಯದ ಬಗ್ಗೆ ಚಿಂತನೆ ಮಾಡಿದರೆ, ಇರತಕ್ಕಂಥದ್ದರಲ್ಲಿ ಒಂದು ಒಳ್ಳೆಯ ಬಜೆಟ್ ಅನ್ನು ಕೊಟ್ಟ ಹಾಗಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಜು (ರಾಮನಗರ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ಸನ್ಮಾನ್ಯ ಮುಖ್ಯಮಂತ್ರಿಯವರು 5ನೇ ತಾರೀಖಿನಂದು ಬಜೆಟ್ ಮಂಡನೆ

ಮಾಡುವಾಗ ಕವಿಗಳ, ಸಾಹಿತಿಗಳ, ವಚನಗಳ ಸಾಲುಗಳನ್ನು ಉಲ್ಲೇಖ ಮಾಡಿ, ಸರ್ವರಿಗೂ ಸಮ ಬಾಳು ಸರ್ವರಿಗೂ ಸಮಪಾಲು ಎಂಬ ವಚನವನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಸರ್ವರಿಗೂ ಸಮಬಾಳು ಸಮಪಾಲು ಎಂದು ಹೇಳಿದರೆ ಕೇವಲ ಶಿವಮೊಗ್ಗ ಅಥವಾ ಬಳ್ಳಾರಿಯಲ್ಲ. ಸಮಗ್ರ ಕರ್ನಾಟಕವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಬಜೆಟ್‌ನಲ್ಲಿ ಅನುಕೂಲ ಮಾಡಿಕೊಡಬೇಕಾಗಿತ್ತು. ರಾಮನಗರ ಜಿಲ್ಲೆಯಾಗಿ ಎರಡು ವರ್ಷಗಳಾದರೂ ಕೂಡ ಇದುವರೆಗೂ ಅದು ಜಿಲ್ಲೆ ಆಗುವಂಥ ಸೌಲಭ್ಯಗಳನ್ನು ಒದಗಿಸಿ ಕೊಡಲಿಲ್ಲ. ಮಾಜಿ ಮುಖ್ಯಮಂತ್ರಿಯಾದ ಸನ್ಮಾನ್ಯ ಕುಮಾರಸ್ವಾಮಿಯವರು ಹಾಕಿಕೊಟ್ಟ ಅನೇಕ ಕಾರ್ಯಕ್ರಮಗಳಿಗೆ ಹಣ ಕೊಡಲು ಪ್ರಯತ್ನ ಮಾಡಲಿಲ್ಲ. ಆದ್ದರಿಂದ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಯಾದ ನಂತರ ರಾಮನಗರವನ್ನು ಮಲತಾಯಿ ಧೋರಣೆಯಿಂದ ಕಾಣುತ್ತಿದ್ದಾರೆ. ಅದಾಗಬಾರದು. ಸಿದ್ದರಾಮಯ್ಯನವರು ಮತ್ತು ರೇವಣ್ಣನವರು ಮಾತನಾಡುವ ಮಧ್ಯೆ 'ಬಜೆಟ್ ನೋಡಿ, ಜನಸಾಮಾನ್ಯರಿಗೆ ಹತ್ತಿರವಾದ ಬಜೆಟ್ ಅನ್ನು ಕೊಡುತ್ತೇನೆ' ಎಂದು ಬಹಳ ಘಂಟಾಘೋಷವಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಬಜೆಟ್ ಮಂಡನೆ ಮಾಡಿದ ಬಳಿಕ ಯೋಚನೆ ಮಾಡಿ ನೋಡಿದಾಗ ಬೆಟ್ಟವನ್ನು ಅಗೆದು ಇಲಿ ಹಿಡಿದ ಹಾಗೆ ಆಗಿದೆ. ಆದ್ದರಿಂದ ಇದು ಜನಸಾಮಾನ್ಯರ ಬಜೆಟ್ ಆಗಿಲ್ಲ. ಕೇವಲ ಉಳ್ಳವರ ಅಥವಾ ಮಾತು ಯಾರು ಜಾಸ್ತಿ ಆಡುತ್ತಾರೆ, ಅವರವರ ಅನುಕೂಲಕ್ಕೆ ತಕ್ಕಂತೆ ಬಜೆಟ್ ಮಂಡನೆ ಮಾಡುತ್ತಾರೆನ್ನುವುದನ್ನು ನೋಡಿ ನನಗೆ ತುಂಬಾ ಬೇಜಾರಾಗಿದೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಿ ಬರುವ ದಿನಗಳಲ್ಲಿ ರೈತರ ಪರ, ಮಹಿಳೆಯರ ಪರ, ಯುವಕರ ಪರ ಯಾವುದೇ ವಿಸ್ತೃತ ಕಾರ್ಯಕ್ರಮವನ್ನು ಹಾಕಿಕೊಳ್ಳದೆ, ಯಾವುದೇ ನಿಶ್ಚಿತ ಗುರಿ ಇಟ್ಟುಕೊಳ್ಳದೆ ಅವರಿಗೆ ಅನುಕೂಲ ಮಾಡುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಮಠ ಮಾನ್ಯಗಳಿಗೆ ಹೆಚ್ಚಿಗೆ ಹಣ ಕೊಟ್ಟು ಜನಸಾಮಾನ್ಯರಿಗೆ, ರೈತರಿಗೆ, ಹಳ್ಳಿಗಾಡಿನ ಜನರಿಗೆ ಅನುಕೂಲವಾಗುವ ಯಾವುದೇ ಒಂದು ಒತ್ತು ಕೊಟ್ಟು ಅವರು ಕೆಲಸ ಮಾಡಲಿಲ್ಲವೆಂದು ಹೇಳುವುದಕ್ಕಿಷ್ಟಪಡುತ್ತೇನೆ. ಮಹಿಳೆಯರ ಪರವಾಗಿ ಯಾವುದೇ ನಿರ್ದಿಷ್ಟ ವಾದ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲ. ನಿಮಗೆಲ್ಲ ಗೊತ್ತಿರುವ ಹಾಗೆ, ಕಳೆದ ವರ್ಷ 118 ಲಕ್ಷ ಟನ್ ಇರಬೇಕಾದುದು ಕೇವಲ 106 ಲಕ್ಷ ಟನ್ ಉತ್ಪಾದನೆಯಾಗಿ ಆಹಾರೋತ್ಪಾದನೆ ಕಡಿಮೆಯಾಗುತ್ತಿದೆ. ಎಣ್ಣೆಕಾಳು

ಉತ್ಪಾದನೆ ಕೂಡ 16 ಲಕ್ಷ ಟನ್‌ನಿಂದ 11 ಲಕ್ಷ ಟನ್‌ಗೆ ಇಳಿದಿದೆ. ಇದೆಲ್ಲ ಏನು ಸೂಚಿಸುತ್ತದೆಂದರೆ, ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆಹಾರೋತ್ಪಾದನೆ ಮಾಡುವುದಕ್ಕೆ ಯಾವುದೇ ಸೌಲಭ್ಯಗಳಿಲ್ಲದೆ ಅವರು ವಂಚಿತರಾಗಿದ್ದಾರೆ. ಅವರಿಗೆ ಯಾವುದೇ ಅನುಕೂಲವಿಲ್ಲದೆ ಉತ್ಪತ್ತಿ ಮಾಡಲಿಕ್ಕೆ ಅನಾನುಕೂಲವಾಗುವಂಥ ವಾತಾವರಣ ಸೃಷ್ಟಿಯಾಗಿದೆ. ಯುವಕರು ಹಳ್ಳಿಗಳನ್ನು ಬಿಟ್ಟು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅವರಿಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಮುಖ್ಯಮಂತ್ರಿಯವರು ಹಾಕಿಕೊಂಡಿಲ್ಲ. ಹಿಂದುಳಿದ ವರ್ಗಕ್ಕೆ ಕಳೆದ ವರ್ಷ 124 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದು ಈ ವರ್ಷ ಕೇವಲ 34 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿರುವುದರಿಂದ ಹಿಂದುಳಿದ ವರ್ಗಕ್ಕೆ ಯಾವುದೇ ಅನುಕೂಲ ಮಾಡಿಕೊಡಲಿಕ್ಕಾಗಲಿಲ್ಲ. ಜೊತೆಗೆ, ಹಾಸ್ಟೆಲ್‌ನಲ್ಲಿ 10ನೇ ತರಗತಿಗಿಂತ ಕೆಳಗಿನ ಹಂತದಲ್ಲಿ ಓದುವ ಮಕ್ಕಳಿಗೆ 600 ರೂ. ಇದ್ದದನ್ನು 650 ರೂ.ಗೆ ಹೆಚ್ಚಿಸಿದ್ದಾರೆ. ಅದನ್ನು 750 ರೂ.ಗೆ ಹೆಚ್ಚಿಸಿದರೆ ಅನುಕೂಲವಾಗುತ್ತದೆ. ಕೇವಲ ಒಂದು ಊಟಕ್ಕೆ 10 ರೂ. ಎಂದರೂ 650–750 ರೂ. ಸಾಲದು. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕಾಗಿತ್ತು. ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಪೂರೈಕೆ ಮಾಡಲಾಗುತ್ತಿಲ್ಲ. ಅದರಲ್ಲಿಯೂ ಕೂಡ ಸೋರಿಕೆಯಾಗದೆ ವಿದ್ಯಾರ್ಥಿಗಳಿಗೆ ತಲುಪುವಂಥ ವ್ಯವಸ್ಥೆ ಆಗಬೇಕು. ಸರ್ಕಾರ ಹಳ್ಳಿಗಳಿಗೆ 6 ಗಂಟೆ 3 phase ಮತ್ತು 6 ಗಂಟೆ single phase current ಕೊಡುತ್ತೇವೆಂದು ಈಗಾಗಲೇ ಘೋಷಣೆ ಮಾಡಿದೆ. ಆದರೂ ಕೂಡ ಹಳ್ಳಿಗಳಲ್ಲಿ ಇದುವರೆಗೆ ಆ ಕೆಲಸವಾಗುತ್ತಿಲ್ಲ. ಇವತ್ತೂ ಕೂಡ 3 ಗಂಟೆ ಮಾತ್ರ 3 phase ಕರೆಂಟ್ ಬರುತ್ತಿದೆ. ಇದು ಸುಧಾರಣೆಯಾಗಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತಿದ್ದೇನೆ. 1 ಸಾವಿರ ಹಳ್ಳಿಗಳನ್ನು ಸುವರ್ಣ ಗ್ರಾಮ ಯೋಜನೆ ಮೂಲಕ ಸುವರ್ಣ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಸುವರ್ಣ ಗ್ರಾಮ ಎಂದರೆ ಹಳ್ಳಿಗಳಲ್ಲಿ ಕೇವಲ concrete ರಸ್ತೆ ಮಾಡುವುದಲ್ಲ. ಸುವರ್ಣ ಗ್ರಾಮ ಎಂದರೆ ಹಳ್ಳಿಯಲ್ಲಿ ಸಮಗ್ರ ಅಭಿವೃದ್ಧಿ ಮಾಡಬೇಕು. ಅದಕ್ಕೆ ಬೇಕಾದ ಶಾಲೆ, ಶೌಚಾಲಯ, ಪೀಠೋಪಕರಣ, ಕಟ್ಟಡಗಳನ್ನು ನಿರ್ಮಾಣ ಮಾಡಿದರೆ ಮಾತ್ರ ಮತ್ತು ಒದಗಿಸಿದರೆ ಮಾತ್ರ ಸಮಗ್ರ ಅಭಿವೃದ್ಧಿಯಾಗುತ್ತದೆ. ಬರುವ ದಿನಗಳಲ್ಲಿ 1 ಸಾವಿರ ಹಳ್ಳಿಗಳನ್ನು

ಸುವರ್ಣ ಗ್ರಾಮಗಳೆಂದು ಗುರುತಿಸಿದ್ದೀರಿ, ಆ ಹಳ್ಳಿಗಳಿಗೆ ಕೊಡುತ್ತಿರುವ 1 ಕೋಟಿ ರೂ. ಸಾಕಾಗುವುದಿಲ್ಲ. ಸಮಗ್ರ ಅಭಿವೃದ್ಧಿ ಮಾಡಬೇಕಾದರೆ ಇನ್ನೂ ಹೆಚ್ಚು ಹಣ ಕೊಡಬೇಕಾಗುತ್ತದೆಂದು ನಾನು ನಿಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಆ ಗ್ರಾಮದಲ್ಲಿ ಸಮುದಾಯ ಕಟ್ಟಡವನ್ನೂ ಕೂಡ ಕಟ್ಟಿಸಬೇಕು. ಚರಂಡಿ ವ್ಯವಸ್ಥೆಯನ್ನೂ ಉತ್ತಮ ಪಡಿಸಬೇಕು. ಪಟ್ಟಣ ಪ್ರದೇಶಗಳಲ್ಲಿರುವ ಎಲ್ಲಾ ಅನುಕೂಲಗಳೂ ಹಳ್ಳಿಗಳಿಗೂ ಸಿಗಬೇಕು. ಆಗ ಮಾತ್ರ ಸುವರ್ಣ ಗ್ರಾಮದ ಕನಸು, ಯೋಜನೆಗಳು ಸಫಲವಾಗುತ್ತವೆ.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಾವು 5–5 ನಿಮಿಷ ಕಾಲ ಬಜೆಟ್ ಮೇಲೆ ಮಾತನಾಡುತ್ತೇವೆ. ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ಇಂದು ಮಧ್ಯಾಹ್ನ 2.30 ವರೆಗೆ ಮಾತ್ರ ಸದನ ನಡೆಯುತ್ತದೆ.

ಶ್ರೀ ಡಿ.ಎನ್. ಜೀವರಾಜ್ : ಕರಡಿ ಸಂಗಣ್ಣನವರೆ, senior member ಇದ್ದೀರಿ, ತಮಗೆ ಗೊತ್ತಿರುವ ಹಾಗೆ, ಇವತ್ತು ಶುಕ್ರವಾರ. ಇನ್ನೂ ಶಾಸನ ರಚನೆ ಬೇರೆ ಆಗಬೇಕಲ್ಲವೇ? ಈಗ ಸಮಯ ಮಧ್ಯಾಹ್ನ 1.10 ಗಂಟೆಯಾಗಿದೆ. ನಿಮಗೆ ಸಭಾಧ್ಯಕ್ಷರು ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ 17ನೇ ತಾರೀಖು ಅವಕಾಶ ಕೊಡುತ್ತಾರೆ.

ಅಧ್ಯಕ್ಷರು : 17ನೇ ತಾರೀಖು ಬಜೆಟ್ ಮೇಲೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡುತ್ತೇನೆ. 17 ರಂದು ಯಾವುದೇ Bill ಚರ್ಚೆಗೆ ಇರುವುದಿಲ್ಲ.

7. ಶಾಸನ ರಚನೆ :

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

I ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.